ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

# ಸ್ವಾಭಿಮಾನಿ ಸಹಕಾರಿ

Swabhimani Sahakari

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Volume - 12
Issue - 7
Pages - 24
₹ - 12
July - 2015




ಸೌಹಾರ್ದ ಸಹಕಾರಿಗಳ ಸಂಖ್ಯೆ : 3280 ‘ಇ’ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 815

# ಸಹಕಾರಿ ದಶಮಾನ ಸಾರ್ಥಕ ಆಚರಣೆಗಾಗಿ ಸದಸ್ಯರ ಪಾಲುಗಾರಿಕೆ ಹಾಗೂ ಸಹಕಾರಿಗಳ ಆಡಳಿತದ ಗುಣಮಟ್ಟ ಉನ್ನತೀಕರಣ ಇಂದಿನ ಅವಶ್ಯಕತೆ



> ಸಹಕಾರ ಸಂಸ್ಥೆಗಳು ದೇಶ ಸಂಕಷ್ಟದಲ್ಲಿದ್ದಾಗ್ಯೂ ಉತ್ತಮವಾಗಿ ಕಾರ್ಯ ನಿರ್ವಹಿಸಬಲ್ಲವು ಎಂಬುದನ್ನು ಸತ್ಯವಾಗಿಸಿವೆ. ಇದನ್ನು ಗಮನಿಸಿದ ಅಂತರ ರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯಿಂದ ವರ್ಷ 2012 ರಿಂದ 2020 ರವರೆಗೆ "ಸಹಕಾರ ದಶಮಾನ ಆಚರಣೆ"ಯನ್ನು ಘೋಷಿಸಲಾಗಿದೆ.

ಆತ್ಮೀಯ ಸಹಕಾರಿ ಬಂಧುಗಳೇ...

2012 ಅಂತರ ರಾಷ್ಟ್ರೀಯ ಸಹಕಾರಿ ವರ್ಷ ಆಚರಣೆಯ ಸಂದರ್ಭದಲ್ಲಿ ವಿಶ್ವದ ಸಹಕಾರಿ ಸಂಸ್ಥೆಗಳು ಸಕ್ರೀಯವಾಗಿ ಪಾಲ್ಗೊಂಡು ವಿಶ್ವ ಸಂಸ್ಥೆಯ ಘೋಶವಾಕ್ಯವಾದ "ಸಹಕಾರ ಸಂಸ್ಥೆಗಳು ಉತ್ತಮ ರಾಷ್ಟ್ರವನ್ನು ನಿರ್ಮಾಣ ಮಾಡಬಲ್ಲವು" ಎಂಬುದು ಅಕ್ಷರಶಃ ಸತ್ಯ ಎಂಬುದನ್ನು ಜಗತ್ತಿಗೆ ತೋರಿಸಿದವು. ಅದೇ ರೀತಿಯಲ್ಲಿ ಸಹಕಾರ ಸಂಸ್ಥೆಗಳು ದೇಶ ಸಂಕಷ್ಟದಲ್ಲಿದ್ದಾಗ್ಯೂ ಉತ್ತಮವಾಗಿ ಕಾರ್ಯ ನಿರ್ವಹಿಸಬಲ್ಲವು ಎಂಬುದನ್ನು ಸತ್ಯವಾಗಿಸಿವೆ. ಇದನ್ನು ಗಮನಿಸಿದ ಅಂತರ ರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯಿಂದ ವರ್ಷ 2012 ರಿಂದ 2020 ರವರೆಗೆ "ಸಹಕಾರ ದಶಮಾನ ಆಚರಣೆ"ಯನ್ನು ಘೋಶಿಸಲಾಗಿದೆ. ಸಹಕಾರ ದಶಮಾನದ ಮೂಲ ಉದ್ದೇಶವೇ ಸದಸ್ಯರ ಪಾಲುಗಾರಿಕೆ ಹಾಗೂ ಗುಣಮಟ್ಟದ ಆಡಳಿತ ಸಾಧಿಸುವುದೆ ಆಗಿದೆ. ಸಹಕಾರಿಗಳು ಗಮನ ಹರಿಸಬೇಕಿದೆ.

ದೇಶದಲ್ಲಿ ಸಹಕಾರ ಸಂಸ್ಥೆಗಳು ಸಂಖ್ಯಾತ್ಮಕವಾಗಿ ಬೆಳೆದಿವೆ. ಬೆಳೆಯಲು ಇನ್ನೂ ಅವಕಾಶಗಳು ಇವೆ. ಹಲವಾರು ಸಂಸ್ಥೆಗಳು ರಾಜ್ಯ ರಾಷ್ಟ್ರ ಮಟ್ಟದಲ್ಲಿ ಗುಣಾತ್ಮಕವಾಗಿ ಕಾರ್ಯ ನಿರ್ವಹಿಸುತ್ತಿವೆಯಾದರೂ ಪ್ರಾಥಮಿಕ ಹಂತದಲ್ಲಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸದಸ್ಯರ ಪಾಲುಗಾರಿಕೆ ಹಾಗು ಉತ್ತಮ ಗುಣಮಟ್ಟದ ಆಡಳಿತ ಇನ್ನೂ ಹೆಚ್ಚಾಗಬೇಕಿದೆ. ಇದನ್ನು ಗಮನಿಸುತ್ತಿರುವ ಕೇಂದ್ರದ ತೆರಿಗೆ ವಿಭಾಗದವರು ರಿಸರ್ವ ಬ್ಯಾಂಕಿನವರು ಕೆಲ ಆರ್ಥಿಕ ತಜ್ಞರು ಸಹಕಾರ ಸಂಸ್ಥೆಗಳಿಗೆ ಇದುವರೆಗೆ ಸಾಕಷ್ಟು ರಿಯಾಯಿತಿ ಸೌಲಭ್ಯಗಳನ್ನು ನೀಡಿಯಾಗಿದೆ. ಸಹಕಾರಿ ಸಂಸ್ಥೆಗಳಲ್ಲಿ ಸದಸ್ಯರ ಪಾಲುಗಾರಿಕೆ ನೀರಿಕ್ಷಿಸಿದ ಮಟ್ಟಕ್ಕಿಲ್ಲ. ಆಡಳಿತವು ಕೆಲವೇ ಜನರಲ್ಲಿ ಕೇಂದ್ರೀಕೃತವಾಗಿದೆ. ಗುಣಾತ್ಮಕ ಬೆಳವಣಿಗೆ ಕಾಣುತ್ತಿಲ್ಲ. ರಾಷ್ಟ್ರದ ಅರ್ಥವ್ಯವಸ್ಥೆಯಲ್ಲಿ ಸಹಕಾರಿ ಸಂಸ್ಥೆಗಳ ಪಾಲು ಸಹ ಗಣನೀಯವಾಗಿ ಕಂಡುಬರುತ್ತಿಲ್ಲ. ಹೀಗಾಗಿ ರಿಯಾಯಿತಿಗಳ ಅವಶ್ಯಕತೆ ಇರುವುದಿಲ್ಲ ಎಂದು ವಾದಿಸುತ್ತಿದ್ದಾರೆ.

ರಾಜ್ಯದ ಸೌಹಾರ್ದ ಸಹಕಾರಿಗಳು ಸಹಕಾರಿಗಳ ಚಟುವಟಿಕೆಗಳಲ್ಲಿ ಸದಸ್ಯರ ಪಾಲುಗಾರಿಕೆಯ ಪ್ರಮಾಣ ಹೆಚ್ಚುವಂತಾಗಲು ಆಗಿಂದಾಗ್ಗೆ ಸಹಕಾರಿಗಳಲ್ಲಿ ಸಭೆ ಸಮಾರಂಭಗಳನ್ನು ಹಮ್ಮಿಕೊಂಡು, ಸದಸ್ಯತ್ವ ಅಭಿಯಾನ, ಠೇವಣಿ ಸಂಗ್ರಹ ಅಬಿಯಾನ, ಸಾಲ ವಸೂಲಾತಿ ಮಾಸಾಚರಣೆ, ಸದಸ್ಯರಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸುವ ಕಾರ್ಯಕ್ರಮಗಳನ್ನು, ಪ್ರತಿಭಾ ಪುರಸ್ಕಾರಗಳನ್ನು, ಸಾಮೂಹಿಕ ಸ್ವಚ್ಚತಾ ಕಾರ್ಯಕ್ರಮ , ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ, ಪ್ರಬಂಧ ಹಾಗೂ ಭಾಷಣ ಸ್ಪರ್ಧೆ ಇತ್ಯಾದಿಗಳನ್ನು ಏರ್ಪಡಿಸುವುದರ ಮೂಲಕ ಸದಸ್ಯರ ಪಾಲುಗಾರಿಕೆಯನ್ನು ಹಾಗೂ ಇವೆಲ್ಲವುಗಳನ್ನು ಹಮ್ಮಿಕೊಳ್ಳುತ್ತಲಿರುವಾಗ ಆಡಳಿತ ಗುಣಮಟ್ಟ ಸುಧಾರಣೆಗೆ ಆದ್ಯತೆಯನ್ನು ನೀಡಿದಾಗ ಸಹಕಾರ ದಶಮಾನ ಆಚರಣೆಯ ಮೂಲ ಉದ್ದೇಶಕ್ಕೆ ಸ್ಪಂದಿಸಿದಂತಾಗುತ್ತದೆ. ಸೌಹಾರ್ದ ಸಹಕಾರಿಗಳ ಬೆಳವಣಿಗೆ ಹಾಗೂ ಸಾಧನೆಗಳು ಸಹ ತಾವೇ ತಾವಾಗಿ ಹೆಚ್ಚುತ್ತವೆ.

▸▸ **ಗುರುನಾಥ ಜಾಂತಿಕರ,** ಅಧ್ಯಕ್ಷರು

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

**ಶ್ರೀ ಗುರುನಾಥ ಜಾಂತಿಕರ**
ಗೌರವ ಅಧ್ಯಕ್ಷರು

**ಶ್ರೀ ಹೆಚ್.ವಿ.ರಾಜೀವ**
ಗೌರವ ಉಪಾಧ್ಯಕ್ಷರು

**ಶ್ರೀ ಎಸ್.ಆರ್.ಸತೀಶಚಂದ್ರ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜೆ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು

## ಒಳ ಪುಟಗಳಲ್ಲಿ . . .

ಜ್ಞಾನ ಜ್ಯೋತಿ ..... 4
ಡಿಜಿಟಲ್ ಇಂಡಿಯಾಗೆ ಪ್ರಧಾನಿ ಚಾಲನೆ ..... 5
ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ಚಂದ್ರವನ ಆಶ್ರಮದ ನಿರ್ಮಲ ವಾತವರಣದಲ್ಲಿ ವ್ಯಕ್ತಿತ್ವ ವಿಕಸನ ತರಬೇತಿ ಮುಕ್ತಾಯ ..... 6
ಸೌಹಾರ್ದ ಸಹಕಾರಿಗಳ ಬೆಳವಣಿಗೆ ಹಾಗೂ ಕಾರ್ಯಚಟುವಟಿಕೆಗಳು ತೃಪ್ತಿಕರ – ಶ್ರೀಮತಿ ಆಶಾ ..... 7
ವಿವಿಧ ಸಹಕಾರಿ ಸಂಸ್ಥೆಗಳಿಗೆ ಅಧ್ಯಯನ ತಂಡದ ಭೇಟಿ ..... 10
ಮೈಸೂರು ವಿಶ್ವವಿದ್ಯಾಲಯದ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಹಾಗೂ ಸೌಹಾರ್ದ ಸಹಕಾರಿ ಬೆಳವಣಿಗೆ ಹಾಗೂ ಸಾಧನೆಗಳ ಮೌಲ್ಯಮಾಪನ ..... 12
ರಾಷ್ಟ್ರೀಯ ಸಹಕಾರಿ ಯೂನಿಯನ್ ಅಧ್ಯಕ್ಷ ಶ್ರೀ ಚಂದ್ರಪಾಲಸಿಂಗ್ ಯಾದವ್ ಸಂಯುಕ್ತ ಸಹಕಾರಿಗೆ ಭೇಟಿ ..... 13
ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರ (NCCE), ನವದೆಹಲಿಯಲ್ಲಿ ತರಬೇತಿ ..... 15
ಕರ್ನಾಟಕ ರಾಜ್ಯಪತ್ರ ..... 16
ಸಹಕಾರಿ ಕ್ಷೇತ್ರದಲ್ಲಿ ವ್ಯವಹಾರ ವೃದ್ಧಿಯ ಮಹತ್ವ ..... 19
ಪ್ರತಿಷ್ಠಿತ ಸೌಹಾರ್ದ ಸಹಕಾರಿ ಬ್ಯಾಂಕುಗಳಲ್ಲಿ ಉದ್ಯೋಗಾವಕಾಶ ..... 20
ಸಹಕಾರಿ ಕ್ಷೇತ್ರದಲ್ಲಿ ವ್ಯವಹಾರ ನಿರ್ವಹಣೆಯ ಪಾತ್ರ ..... 21
RBI News for June - 2015 ..... 23

# ಸಂಪಾದಕೀಯ

## ಸಹಕಾರಿಗಳ ಕಾರ್ಯಚಟುವಟಿಕೆಗಳ ಮೌಲ್ಯಮಾಪನ

ಪ್ರತಿಯೊಬ್ಬ ವ್ಯಕ್ತಿ, ಸಂಸ್ಥೆ, ಸಮಾಜ ರಾಜ್ಯ ಮತ್ತು ದೇಶದ ಕಾರ್ಯ ಚಟುವಟಿಕೆಗಳು ಪರಿಣಾಮಕಾರಿಯಾಗಿ ವ್ಯವಸ್ಥಿತವಾಗಿ ಜರುಗಬೇಕಾದರೆ ಆ ಕಾರ್ಯಗಳಿಗೆ ಅವಶ್ಯಕವಿರುವ ಸಂಪನ್ಮೂಲಗಳ ಸಂಗ್ರಹ ಕಾರ್ಯ, ಉತ್ತಮ ಕ್ರಿಯಾಯೋಜನೆ ಸಿದ್ಧತೆ, ಹಾಗೂ ಯೋಜನೆಗಳ ಪರಿಣಾಮಕಾರಿ ಅನುಷ್ಠಾನದ ಜೊತೆಗೆ ಪ್ರತಿಯೊಂದು ಕಾರ್ಯಮುಗಿದ ಮೇಲೆ ಅವುಗಳ ಮೌಲ್ಯಮಾಪನ ಅಗತ್ಯವಾಗಿ ನಡೆಯಲೇಬೇಕು. ಮೌಲ್ಯಮಾಪನವಾಗದಿದ್ದರೆ ನಾವು ಮಾಡಿದ ಕಾರ್ಯ ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಿದೆ ಎಂದು ತಿಳಿಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಮೌಲ್ಯಮಾಪನ ಅಗತ್ಯ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ನಾಯಕತ್ವವನ್ನು ವಹಿಸಿದೆ. ಸೌಹಾರ್ದ ಸಹಕಾರಿಗಳು ಕಳೆದ 15 ವರ್ಷಗಳಿಂದ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳಿಗೆ ಅಗತ್ಯವಾಗುವ ಮಾರ್ಗದರ್ಶನ ನೀಡುವುದರ ಜೊತೆಗೆ ಉತ್ತಮ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಒದಗಿಸುತ್ತಿದೆ. ಇವೆಲ್ಲವುಗಳ ಬಗ್ಗೆ ತಜ್ಞರಿಂದ ಮೌಲ್ಯಮಾಪನ ಮಾಡಿಸಿ ನಾವು ಎಲ್ಲಿದ್ದೇವೆ. ನಮ್ಮ ಕಾರ್ಯ ಹೇಗಿದೆ. ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳು ಹೇಗಿವೆ? ಸದಸ್ಯರ, ಸಾರ್ವಜನಿಕರ, ಸರಕಾರದ ಹಾಗು ಸಹಕಾರಿ ತಜ್ಞರ ಅಭಿಪ್ರಾಯಗಳು ಏನು ಹೇಳುತ್ತವೆ. ಯಾವ ಕ್ಷೇತ್ರದಲ್ಲಿ ಸಾಧನೆಗಳು ತೃಪ್ತಿಕರ, ಯಾವ ಕ್ಷೇತ್ರದ ಕಾರ್ಯಗಳು ಇನ್ನೂ ಸಾಧಿನೆಯಾಗಬೇಕಿರುವ ವಿಷಯಗಳು ಮುಂತಾದವುಗಳನ್ನು ತಿಳಿಯುವುದು ಹಾಗೂ ತಿಳಿದ ಮೇಲೆ ಅದರಂತೆ ಕ್ರಿಯಾಯೋಜನೆ ರೂಪಿಸಿ ಅನುಷ್ಠಾನಗೊಳಿಸುವುದು ಅವಶ್ಯಕ.

ಇದೇ ಉದ್ದೇಶದಿಂದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ತನ್ನ ಕಾರ್ಯಚಟುವಟಿಕೆಗಳನ್ನು ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳನ್ನು ಅಧ್ಯಯನಮಾಡಿ ಮೌಲ್ಯಮಾಪನ ಮಾಡುವ ಕಾರ್ಯವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ವಹಿಸಿರುವ ಕಾರ್ಯ – ಸೌಹಾರ್ದ ಸಹಕಾರಿ ಕ್ಷೇತ್ರದ ಮಹತ್ವದ ಹೆಜ್ಜೆ ಹಾಗೂ ಸಮಗ್ರ ಸಹಕಾರಿ ಕ್ಷೇತ್ರಕ್ಕೆ ಮಾದರಿ ಎಂದು ವಿಶ್ಲೇಷಿಸಬಹುದು. ■

## ಭಕ್ತಿ ಯೋಗ

ಯೋಗ ಇದೊಂದು ಸುಂದರವಾದ ಶಬ್ದ, ಅರ್ಥಪೂರ್ಣ ಶಬ್ದ, ಅಷ್ಟೇ ಪ್ರಚಲಿತ. ಹಲವು ಅರ್ಥದಲ್ಲಿ ಯೋಗ ಶಬ್ದವನ್ನು ನಾವೆಲ್ಲಾ ಬಳಸುತ್ತೇವೆ. ಅವುಗಳಲ್ಲಿ ಅತ್ಯಂತ ಪ್ರಧಾನವಾದದು 'ಸಾಧನೆ' ಸಾಧನ ಯೋಗ. ಮನಸ್ಸನ್ನು ಶುಚಿಗೊಳಿಸುವ ಸಮಗೊಳಿಸುವ ಮನಸ್ಸುನ್ನು ಅರಳಿಸುವ ಅದ್ಭುತ ವಿಧಾನ. ಇನ್ನೊಂದು ಅರ್ಥದಲ್ಲಿ ಇದೊಂದು ಚಲನ ಮಾರ್ಗಕ್ರಮ. ಬದುಕನ್ನು ಆ ಮಾರ್ಗಕ್ರಮದಲ್ಲಿ ರೂಪಿಸುತ್ತಾ ಹೋಗುತ್ತೇವೆ, ನಡೆಯುತ್ತೇವೆ. ಇದು ನಿರಂತರ. ಮಾರ್ಗ ತಪ್ಪದಂತೆ ನಡೆಯೋದು ಯೋಗ, ಸರಿಯಾದ ಮಾರ್ಗದಲ್ಲಿ ನಡೆಯೋದು ಯೋಗ. ಯೋಗ ಶಬ್ದವನ್ನು ಜ್ಞಾನ ಕ್ಷೇತ್ರದಲ್ಲಿ ಧ್ಯಾನ ಕ್ಷೇತ್ರದಲ್ಲಿ, ಬೌದ್ಧಿಕ ಕ್ಷೇತ್ರದಲ್ಲಿ, ಧಾರ್ಮಿಕ ಕ್ಷೇತ್ರದಲ್ಲಿ, ಸಾಮಾಜಿಕ ಕ್ಷೇತ್ರದಲ್ಲಿ ಹೀಗೆ ಜೀವನದ ಎಲ್ಲಾ ರಂಗಗಳಲ್ಲೂ ಬಳಸುತ್ತಾರೆ. ಆ ಯೋಗ ಜೀವನಕ್ಕೊಂದು ರೂಪ ಕೊಟ್ಟಿತು. ನಮ್ಮ ಬಯಕೆಗಳನ್ನು ಈಡೇರಿಸುವ ಶಕ್ತಿ ಅದಕ್ಕಿದೆ. ನಾವು ಬಯಸಿದ್ದನ್ನು ಪಡೆಯಬೇಕಾದರೆ, ನಿರಂತರವಾಗಿ ಸಾಧನೆ ಮಾಡಬೇಕಾಗುತ್ತದೆ. ಅದು ಭಕ್ತಿಯೋಗ ಧ್ಯಾನಯೋಗ ಜ್ಞಾನಯೋಗ ಕರ್ಮಯೋಗವಾಗಿರಬಹುದು. ಭಾವದ ಮಾರ್ಗದಲ್ಲಿ ಸಾಗುವುದು ಭಕ್ತಿಯೋಗ. ಹೀಗೆ ಯೋಗವಾಗಗಳಲ್ಲಿ ವಿವಿಧ ಬಗೆಗಳಿವೆ.




ಭಕ್ತಿಯೋಗ ಪರಮ ಸಂತೋಷ ನೀಡುವ ಯೋಗ. ಅದು ಸೌಖ್ಯ ಅದಕ್ಕೆ ಬಹಳ ಬೆಲೆ. ಅದು ಇದ್ದರೆ ಬದುಕಿಗೆ ಚೇತನ ತುಂಬುತ್ತದೆ ಕಳೆ ತುಂಬುತ್ತದೆ.

ಈ ಮಾರ್ಗದಲ್ಲಿ ನಡೆದರೆ ಬದುಕು ಶ್ರೀಮಂತವಾಗುತ್ತದೆ. ಮನುಷ್ಯ ಸಾವಿರ ಸಾವಿರ ವರ್ಷಗಳಿಂದ ಶಾಂತಿ ಸುಖಗಳನ್ನು ಬಯಸಿದ. ಬುದ್ಧ ಹೇಳಿದ.... ಬದುಕು ದುಃಖಮಯವಾಗಿದೆ. ಬುದ್ಧನಾಗುವ ಮೊದಲು ಸಿದ್ಧಾರ್ಥನಿಗೆ ಬದುಕಿನ ಒಂದು ಮುಖ ಕಾಣಿಸಿತು. ಎಲ್ಲಾ ಕಡೆ ಕಣ್ಣಾಡಿಸಿದ. ರೋಗಿ ನೋಡಿದ, ಸಾವು ನೋಡಿದ, ಮುಪ್ಪು ನೋಡಿದ, ಬಡತನ ನೋಡಿದ, ಮನಸ್ಸಿಗೆ ದುಃಖವಾಯಿತು.

ಸುಖ ಇಲ್ಲಾ ಅಂಥ ಅಲ್ಲ. ಇಷ್ಟೆಲ್ಲಾ ಸುಖದ ಮಧ್ಯೆ ದುಃಖ ಇದೆಯಲ್ಲ ! ಇದನ್ನು ತೆಗೆಯೋದು ಹೇಗೆ? ಬುದ್ಧ ತಯಾರಾದ, ಬದುಕು ದುಃಖಮಯ ಎನಿಸಿತು. ಬದುಕಿನಲ್ಲಿ ಬೌದ್ಧಿಕ, ದೈಹಿಕ, ಮಾನಸಿಕ, ಸಾಮಾಜಿಕ ದುಃಖಗಳಿವೆ. ಇವನ್ನೆಲ್ಲಾ ತೆಗೆಯಬೇಕು. ಸೌಖ್ಯ ಪಡೆಯಬೇಕು ಎಂದು ನಿಶ್ಚಯಿಸಿದ ಇದಕ್ಕಾಗಿ ಎಂಥಾ ತ್ಯಾಗ ಮಾಡಿದ! ಅರಮನೆ ತೊರೆದ, ಸಂಶೋಧಿಸಿದ ಪರಿಹಾರ ಕಂಡುಹಿಡಿದ. 'ಸರ್ವಂ ದುಃಖಂ, ಸರ್ವಂ ಕ್ಷಣಿಕಂ". ದುಃಖ ಯಾವುದಕ್ಕಿಲ್ಲ ಯಾರಿಗಿಲ್ಲ? ಮುಪ್ಪು, ನಿಃಶಕ್ತಿ, ರೋಗ ಯಾರಿಗಿಲ್ಲ? ಸಮಾಜದಲ್ಲಿ ಸುಖ–ದುಃಖದ ತೆರೆ ಇದೆ.

## ಆರ್ಥಿಕ ಸಾಕ್ಷರತೆ

▸▸ ವಸಂತ ಎ. ಪುತ್ತೂರು

ಇಂದಿನ ಅಭಿವೃದ್ಧಿ ಹೊಂದುತ್ತಿರುವ ಸ್ಪರ್ಧಾತ್ಮಕ ಯುಗದಲ್ಲಿ ಸಾಕ್ಷರರಾಗುವುದು ಜಾಗೃತ ವ್ಯಕ್ತಿಯ ಲಕ್ಷಣ. ಸಾಮಾಜಿಕ ಸಾಕ್ಷರತೆ, ಶಿಕ್ಷಣ ಸಾಕ್ಷರತೆಗಳ ಜತೆಗೆ ಆರ್ಥಿಕ ಸಾಕ್ಷರತೆಯೂ ಕೂಡಾ ನಮ್ಮ ಜೀವನದ ಅವಿಭಾಜ್ಯ ಅಂಗ. ಅರ್ಥಶಾಸ್ತ್ರವು ಔದ್ಯೋಗಿಕ, ಸಾಮುದಾಯಿಕ ಹಾಗೂ ನಮ್ಮ ಗೃಹ ಸಂಬಂಧಿ ವಿಷಯಗಳಲ್ಲಿ ಬಹುಮುಖ್ಯ ಪಾತ್ರವಹಿಸುತ್ತದೆ ಎಂಬುದು ನಮಗೆ ತಿಳಿದಿರುವ ಸತ್ಯ. ಆದುದರಿಂದ ಪ್ರತಿಯೊಬ್ಬನೂ ಅರ್ಥಿಕ ಸಾಕ್ಷರತೆ ಹೊದುವುದು ಅನಿವಾರ್ಯ. ಶಿಕ್ಷಣ ಸಾಕ್ಷರತೆಗಳ ಕುರಿತು ಸರಕಾರದ ಅನೇಕ ಯೋಜನೆಗಳಿದ್ದಾಗ್ಯೂ ಆರ್ಥಿಕ ಸಾಕ್ಷರತೆಯ ಬಗ್ಗೆ ಯಾವುದೇ ಆಂದೋಲನ/ಶಿಕ್ಷಣ ಇಲ್ಲದಿರುವುದು ಬಹುತೇಕ ಜನರಲ್ಲಿ ಈ ಬಗ್ಗೆ ಜ್ಞಾನದ ಕೊರತೆಗೆ ಕಾರಣವಾಗಿದೆ.

ಆರ್ಥಿಕ ಸಾಕ್ಷರತೆ ಎಂದರೆ ತನ್ನ ಸುತ್ತಮುತ್ತಲಿನ ಆರ್ಥಿಕ ವ್ಯವಸ್ಥೆ ಹಾಗೂ ತನ್ನ ವೈಯಕ್ತಿಕ ಹಣಕಾಸು ವ್ಯವಸ್ಥೆಗಳಿಗೆ ಸಂಬಂಧಿಸಿ ಅವುಗಳನ್ನು ಗುರುತಿಸಿ ಮೌಲ್ಯಮಾಪನ ಮಾಡಲು ಸಾಮರ್ಥ್ಯ ಹೊಂದಿರುವುದು ಎಂದರ್ಥ. ತನ್ನ ಆರ್ಥಿಕ ಗಳಿಕೆ, ಖರ್ಚು, ಉಳಿತಾಯ ಇವುಗಳ ಕುರಿತು ವ್ಯಕ್ತಿಯು ಉತ್ತಮ ಜ್ಞಾನ ಹೊಂದಿದಾಗ ಆತ ಯೋಜನಾಬದ್ಧ ಜೀವನ ಸಾಗಿಸಲು ಸಾಧ್ಯವಾಗುತ್ತದೆ.

ಪ್ರತಿಯೊಬ್ಬ ವ್ಯಕ್ತಿಯು ತನ್ನ ಸ್ವಂತ ಆರ್ಥಿಕ ತತ್ವಗಳನ್ನು ಹೊಂದಬೇಕು. ಹಣ ನಮ್ಮನ್ನು ಆಳುವ ಬದಲು ನಾವು ಹಣವನ್ನು ಆಳಬೇಕು. ತನ್ನ ಗಳಿಕೆ ಯಾ ಆದಾಯ ಹೊಂದಿಕೊಂಡು ತನ್ನ ಖರ್ಚನ್ನು ಯೋಜಿಸಬೇಕು. ಪ್ರತಿಯೊಬ್ಬ ವ್ಯಕ್ತಿ ಹಾಗೂ ಕುಟುಂಬವು ತನ್ನ ಯೋಜನಾಬದ್ಧ ವರ್ಷದ ಆಯ–ವ್ಯಯ ಹೊಂದಬೇಕು.

ಹೀಗೆ ಮಾಡಿದಾಗ ಮಾತ್ರ ವೈಯಕ್ತಿಕ ಯಾ ಕೌಟುಂಬಿಕ ವ್ಯವಸ್ಥೆಯು ಸಾಲಕ್ಕೆ ಶೂಲವಾಗುವುದು ತಪ್ಪುತ್ತದೆ. ಆ ಮೂಲಕ ಸಂಪತ್ತು ನಾಶವಾಗುವುದನ್ನು ತಪ್ಪಿಸಲು ಸಾಧ್ಯವಾಗುತ್ತದೆ. ವ್ಯಕ್ತಿಯು ತನ್ನ ಗಳಿಕೆಗೆ ಖರ್ಚುಗಳನ್ನು ಹೊಂದಿಸಿಕೊಂಡು ತನ್ನ ಭವಿಷ್ಯಕ್ಕಾಗಿ ಉಳಿತಾಯ/ಸಂಪತ್ತು ಹೆಚ್ಚಿಸುವುದು ಒಳಿತು. ಹೀಗೇ ಆರ್ಥಿಕ ವಿಷಯಗಳ ಬಗ್ಗೆ ಎಲ್ಲಾ ಅಂಶಗಳನ್ನು ತಿಳಿದ ವ್ಯಕ್ತಿ ಅಥವಾ ಕುಟುಂಬವು ಆರ್ಥಿಕ ಸಾಕ್ಷರತೆಯನ್ನು ಹೊಂದಿದೆ ಎಂದು ತಿಳಿಯಲು ಸಾಧ್ಯವಾಗುತ್ತದೆ.

# ಡಿಜಿಟಲ್ ಇಂಡಿಯಾಗೆ ಪ್ರಧಾನಿ ಚಾಲನೆ

## 18 ಲಕ್ಷ ಉದ್ಯೋಗ ಸೃಷ್ಟಿ, 4.5 ಲಕ್ಷ ಕೋಟಿ ರೂ. ಹೂಡಿಕೆ ನಿರೀಕ್ಷೆ / ದೇಶ ವ್ಯಾಪಿ ಇಂಟರ್‌ನೆಟ್, ಡಿಜಿಟಲ್ ಸೇವೆಗಳ ವಿಸ್ತರಣೆ




**ಹೊಸದಿಲ್ಲಿ :** ಕೇಂದ್ರ ಸರಕಾರದ ಮಹತ್ವಾಕಾಂಕ್ಷೆಯ ಡಿಜಿಟಲ್ ಇಂಡಿಯಾ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ದಿನಾಂಕ : 1–7–2015 ರಂದು ಚಾಲನೆ ನೀಡಿದ್ದಾರೆ. "ಇದರಿಂದ 4.5 ಲಕ್ಷ ಕೋಟಿ ರೂ.ಗಳ ಹೂಡಿಕೆ ಮತ್ತು 18 ಲಕ್ಷ ಉದ್ಯೋಗ ಸೃಷ್ಟಿಯಾಗಲಿದೆ," ಎಂದು ಮೋದಿ ಹೇಳಿದ್ದಾರೆ. ಇಂಟರ್‌ನೆಟ್ ಮತ್ತು ಇ–ಆಡಳಿತವನ್ನು ದೇಶದ ಮೂಲೆಮೂಲೆಗೆ ವಿಸ್ತರಿಸುವ ಉದ್ದೇಶವನ್ನು ಒಳಗೊಂಡಿದೆ. ಈ ಯೋಜನೆಯನ್ನು ಉದ್ಯಮ, ಶೈಕ್ಷಣಿಕ ಮತ್ತು ನಾನಾ ಕ್ಷೇತ್ರಗಳು ಉತ್ಸಾಹದಿಂದ ಸ್ವಾಗತಿಸಿವೆ.

'ಮೇಕ್ ಇನ್ ಇಂಡಿಯಾ'ದಷ್ಟೇ 'ಡಿಸೈನ್ ಇನ್ ಇಂಡಿಯಾ' ಕೂಡ ಮುಖ್ಯ. ಭಾರತ 125 ಕೋಟಿ ಜನರ ದೇಶ. ಭಿನ್ನ ಭಾಷೆಗಳಲ್ಲಿ ಭಿನ್ನ ವಯೋಮಾನದವರಿಗೆ ನಾನಾ ವಿನ್ಯಾಸದ ಉತ್ಪನ್ನಗಳನ್ನು ಸಿದ್ಧಪಡಿಸಬೇಕಾಗಿದೆ. ಇದಕ್ಕಾಗಿ ಭಾರತದಲ್ಲಿ ಡಿಸೈನಿಂಗ್‌ಗೆ ಆದ್ಯತೆ ಕೊಡಬೇಕು. ನಮ್ಮ ಯುವಜನರ ಪ್ರತಿಭೆಗಳನ್ನು ಬಳಸಿಕೊಳ್ಳಲೇಬೇಕು," ಎಂದು ಪ್ರಧಾನಿ ಈ ಸಂದರ್ಭದಲ್ಲಿ ಹೇಳಿದರು. "ಡಿಜಿಟಲ್ ಇಂಡಿಯಾದಲ್ಲಿ ಹೈ ಸ್ಪೀಡ್ ಡಿಜಿಟಲ್ ನೆಟ್‌ವರ್ಕ್‌ಗಳು ದೇಶವನ್ನು ಬೆಸೆಯಬೇಕು. ಡಿಜಿಟಲ್ ತಂತ್ರಜ್ಞಾನದ ಆಮದನ್ನು ತಗ್ಗಿಸಬೇಕು. ಜತೆಗೆ ಸೈಬರ್ ಸಮರದ ಕಾರ್ಮೋಡ ಎಲ್ಲೆಡೆ ಕವಿದಿರುವುದರಿಂದ, ಸಂಶೋಧನೆಗಳ ಮೂಲಕ ಸೈಬರ್ ಭದ್ರತೆಯಲ್ಲೂ ಭಾರತ ಮುಂಚೂಣಿಗೆ ಬರಬೇಕು," ಎಂದು ತಮ್ಮ ಕನಸುಗಳನ್ನು ಬಿಚ್ಚಿಟ್ಟರು.

"ಬ್ಯಾಂಕ್ ಲಾಕರ್‌ಗಳಂತೆಯೇ ಡಿಜಿಟಲ್ ಲಾಕರ್‌ಗಳ ಅಗತ್ಯವಿದ್ದು, ಅದರಲ್ಲಿ ನಮ್ಮ ಮುಖ್ಯವಾದ ದಾಖಲೆಗಳನ್ನಿಡಬಹುದು. ದೇಶದಲ್ಲಿ 25 ಕೋಟಿ ಇಂಟರ್‌ನೆಟ್ ಬಳಕೆದಾರರಿದ್ದಾರೆ. ಹೀಗಾಗಿ, ಡಿಜಿಟಲ್ ಇಂಡಿಯಾಗೆ ಸಾಕಷ್ಟು ಅವಕಾಶಗಳಿವೆ," ಎಂದರು.

**ಡಿಜಿಟಲ್ ಇಂಡಿಯಾದ 9 ಆಧಾರ ಸ್ಥಂಭಗಳು :** ಬ್ರಾಡ್‌ಬ್ಯಾಂಡ್ ಹೈವೇಸ್, ಸಾರ್ವತ್ರಿಕ ಫೋನ್, ಸಾರ್ವಜನಿಕ ಇಂಟರ್‌ನೆಟ್, ಇ–ಆಡಳಿತ, ಇ–ಕ್ರಾಂತಿ ಅಂದರೆ ಸೇವೆಗಳ ಎಲೆಕ್ಟ್ರಾನಿಕ್ ಸ್ವರೂಪ, ಎಲ್ಲರಿಗೂ ಮಾಹಿತಿ, ಎಲೆಕ್ಟ್ರಾನಿಕ್ಸ್ ಉತ್ಪಾದನೆ, ಐಟಿ ಉದ್ಯೋಗ, ಆರಂಭಿಕ ಯೋಜನೆಗಳು ಡಿಜಿಟಲ್ ಇಂಡಿಯಾ ಯೋಜನೆಯ 9 ಆಧಾರ ಸ್ತಂಭಗಳೆನ್ನುತ್ತಾರೆ ತಜ್ಞರು.




**ಡಿಜಿಟಲ್ ಇಂಡಿಯಾ ಸಪ್ತಾಹ :** ಡಿಜಿಟಲ್ ಇಂಡಿಯಾ ಅನ್ನುವುದು ಮೋದಿ ಅವರ ಕನಸು. ಯೋಜನೆಯ ಭಾಗವಾಗಿ ಡಿಜಿಟಲ್ ಲಾಕರ್ ಸಿಸ್ಟಮ್, ಮೈ ಗವರ್ನ್ ಡಾಟ್ ಇನ್, ಸ್ವಚ್ಛ ಭಾರತ್ ಮಿಶನ್ ಮೊಬೈಲ್ ಆ್ಯಪ್, ಇ–ಸೈನ್ ಫ್ರೇಮ್‌ವರ್ಕ್, ಇ–ಹಾಸ್ಪಿಟಲ್, ನ್ಯಾಶನಲ್ ಸ್ಕಾಲರ್‌ಶಿಪ್ ವೆಬ್ ಪೋರ್ಟಲ್‌ಗೆ ಚಾಲನೆ ನೀಡಲಾಗಿದೆ. ಭಾರತ್ ನೆಟ್ ಪ್ರೋಗ್ರಾಮ್ ಅಡಿಯಲ್ಲಿ ದೇಶದ ಎಲ್ಲ 2.5 ಲಕ್ಷ ಗ್ರಾಮ ಪಂಚಾಯತಿಗಳಿಗೆ ಇಂಟರ್‌ನೆಟ್ ಮೂಲಕ ಸಂಪರ್ಕ ಕಲ್ಪಿಸಲಾಗುತ್ತಿದೆ. ಸಾರ್ವಜನಿಕ ವೈ–ಫೈ ತಾಣಗಳ ಸಂಖ್ಯೆ ಹೆಚ್ಚಲಿದೆ. ಸರಕಾರ ಮತ್ತು ಖಾಸಗಿ ಸಂಸ್ಥೆಗಳ ಸಹಯೋಗದಲ್ಲಿ ಸೆಂಟರ್ ಆಫ ಎಕ್ಸಲೆನ್ಸ್ ಆನ್ ಇಂಟರ್‌ನೆಟ್ ಆನ್ ಥಿಂಗ್ಸ್ (LMn) ನಾಸ್ಕಾಮ್ ಮಾದರಿಯಲ್ಲಿ ಕಾರ್ಯನಿರ್ವಹಿಸಲಿದೆ.

ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ಚಂದ್ರವನ ಆಶ್ರಮದ ನಿರ್ಮಲ ವಾತವರಣದಲ್ಲಿ ವ್ಯಕ್ತಿತ್ವ ವಿಕಸನ ತರಬೇತಿ ಮುಕ್ತಾಯ

# ಶಿಕ್ಷಣ ಮತ್ತು ತರಬೇತಿ ಜೀವನದ ನಿತ್ಯ ಪ್ರಕ್ರಿಯೆ – ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 13ನೇ ತಂಡದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯ ಕ್ರಮವನ್ನು ಮಂಡ್ಯ ಜಿಲ್ಲೆಯ ಶ್ರೀರಂಗ ಪಟ್ಟಣ ತಾಲ್ಲೂಕು ಪಶ್ಚಿಮವಾಹಿನಿ, ಕಾವೇರಿ ನದಿ ತೀರದ ಚಂದ್ರವನ ಆಶ್ರಮದ ನಿರ್ಮಲ ವಾತಾವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮವನ್ನು ಚಂದ್ರವನ ಆಶ್ರಮದ ಶ್ರೀ ಮ.ನಿ.ಪ್ರ.ಸ್ವ.ತ್ರಿನೇತ್ರ ಮಹಾಂತ ಸ್ವಾಮಿಜಿಯವರು ದೀಪ ಬೆಳಗಿಸಿ ಉದ್ಘಾಟಿಸಿದರು. ನಂತರ ತಮ್ಮ ಆಶೀರ್ವಚನದಲ್ಲಿ ಶಿಕ್ಷಣ ತರಬೇತಿ ಇವುಗಳು ಮಾನವನ ನಿತ್ಯ ಜೀವನದ ಪ್ರಕ್ರೀಯೆಯಾಗಬೇಕು. ಒಬ್ಬ ಉತ್ತಮ ವ್ಯಕ್ತಿಯಾಗಿ ಬಾಳಬೇಕಾದರೆ ಎಲ್ಲ ವಿಧವಾದ ಶಿಕ್ಷಣ ಅಗತ್ಯ. ವ್ಯಕ್ತಿಯ ಬಾಳು ಅರ್ಥಪೂರ್ಣವಾಗಬೇಕಾದರೆ ತರಬೇತಿ ಅಗತ್ಯ. ಹುಟ್ಟಿನಿಂದ ಯಾವ ವ್ಯಕ್ತಿಯೂ ಪರಿಪೂರ್ಣನಲ್ಲ. ಜೀವನದ ಎಲ್ಲ ಕ್ಷಣಗಳನ್ನು ಅರ್ಥಪೂರ್ಣವಾಗಿ ಬಳಸಿಕೊಂಡು



ಕಾರ್ಯನಿರ್ವಹಿಸಿದಾಗ ಮಾತ್ರ ಒಬ್ಬ ದಕ್ಷ ವ್ಯಕ್ತಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ಎಂದು ತಿಳಿಸಿ 10 ದಿನಗಳ ಈ ತರಬೇತಿ ಸೌಹಾರ್ದ ಸಹಕಾರಿ ಕ್ಷೇತ್ರದ ಅತ್ಯಂತ ಮಹತ್ವದ ಕಾರ್ಯಕ್ರಮವಾಗಿದೆ ಎಲ್ಲರೂ ಸಕ್ರಿಯವಾಗಿ ಭಾಗವಹಿಸಿ ಅವಕಾಶದ ಈ ತರಬೇತಿಯ ಪ್ರಯೋಜನ ಪಡೆದುಕೊಳ್ಳಿ ಎಲ್ಲರಿಗೂ ಶುಭವಾಗಲಿ ಎಂದು ಶುಭ ಹಾರೈಸಿದರು.

# ವ್ಯಕ್ತಿತ್ವ ವಿಕಸನಕ್ಕೆ ತರಬೇತಿ ಅಗತ್ಯ – ಗುರುನಾಥ ಜಾಂತಿಕರ



ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರರವರು ಮಾತನಾಡಿ ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು, ಸಿಬ್ಬಂದಿಯವರಿಗೆ ಹಾಗೂ ಸದಸ್ಯರಿಗೆ ಹಲವು ಬಗೆಯ ತರಬೇತಿ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುತ್ತಲಿದೆ. ವಿಶೇಷವಾಗಿ ಸಿಬ್ಬಂದಿಯವರಿಗಾಗಿ ಈ ರೀತಿಯ 10 ದಿನಗಳ ಅಲ್ಪಾವಧಿಯ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮವನ್ನು ವರ್ಷಕ್ಕೆ 2 ಬಾರಿ ಹಮ್ಮಿಕೊಳ್ಳುತ್ತಲಿದೆ. ಇದು 13 ನೇ ತಂಡವಾಗಿದೆ. ಕಳೆದ 12 ತಂಡಗಳ ತರಬೇತಿ ಕಾರ್ಯಕ್ರಮಗಳನ್ನು ಉತ್ತಮವಾದ ಪರಿಸರದಲ್ಲಿ, ಉತ್ತಮ ವಿಷಯಗಳನ್ನು ಅಳವಡಿಸಿ ತಜ್ಞ ಸಂಪನ್ಮೂಲ ವ್ಯಕ್ತಿಗಳಿಂದ, ಉಪನ್ಯಾಸದ ವ್ಯವಸ್ಥೆಯನ್ನು ಮಾಡಿಸಲಾಗಿದೆ. ಸಹಕಾರಿ ಕ್ಷೇತ್ರದ ವಿಷಯಗಳ ಜೊತೆಗೆ ಉತ್ತಮ ಆರೋಗ್ಯಕ್ಕಾಗಿ ಪ್ರತಿದಿನ ಯೋಗ, ಉತ್ತಮ ಆಹಾರ ಪದ್ಧತಿ, ಸಭೆ ಸಮಾರಂಭಗಳ ನಿರ್ವಹಣೆ, ತಂಡವಾಗಿ ಕಾರ್ಯನಿರ್ವಹಿಸುವುದು, ವರದಿ ಬರೆಯುವುದು, ಸಹಜೀವನ, ಸಹಭೋಜನ ಹಾಗೂ ಮಾನವೀಯ ಮೌಲ್ಯಗಳನ್ನು ಆದರಿಸುವುದು, ರೂಢಿಸಿಕೊಳ್ಳುವುದರ ಬಗ್ಗೆ ತರಬೇತಿ ನಿಡಲಾಗುತ್ತದೆ. ಹೀಗಾಗಿ ಈ ತರಬೇತಿ ಹೆಚ್ಚಿನ ಮಹತ್ವವಿದೆ. ಹೆಚ್ಚು ಜನರು ಭಾಗವಹಿಸುವುದಕ್ಕೆ ಹೆಚ್ಚಿಗೆ ಬೇಡಿಕೆ ಇದೆ ಎಂದು ತಿಳಿಸಿ ಭಾಗವಹಿಸಿದ ಸಿಬ್ಬಂದಿಯವರು ಸೌಹಾರ್ದ ಸಹಕಾರಿಗಳಿಗೆ ಆಸ್ತಿಯಾಗಿದ್ದಾರೆ ಎಂದು ತಿಳಿಸಿದರು.

# ಸೌಹಾರ್ದ ಸಹಕಾರಿಗಳ ಬೆಳವಣಿಗೆ ಹಾಗೂ ಕಾರ್ಯಚಟುವಟಿಕೆಗಳು ತೃಪ್ತಿಕರ - ಶ್ರೀಮತಿ ಆಶಾ

ರಾಜ್ಯದ ಸೌಹಾರ್ದ ಸಹಕಾರಿಗಳ ಬೆಳವಣಿಗೆ ಹಾಗೂ ಕಾರ್ಯಚಟುವಟಿಕೆಗಳು ತೃಪ್ತಿಕರವಾಗಿದೆ ಎಂದು ಮೈಸೂರು ವಿಭಾಗದ ಸಹಕಾರಿ ಜಂಟಿನಿಬಂಧಕರಾದ ಶ್ರೀಮತಿ ಆಶಾರವರು ಅಭಿಪ್ರಾಯಪಟ್ಟರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಅವರು ಸಂಯುಕ್ತ ಸಹಕಾರಿಯವರು ಉತ್ತಮ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ಇದರಿಂದ ಸೌಹಾರ್ದ ಸಹಕಾರಿಗಳಿಗೆ ಉತ್ತಮ ಪ್ರಯೋಜನವಾಗುತ್ತಿದೆ. ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಸಹಕಾರ ಇಲಾಖೆಯು ಪೂರ್ಣ ಸಹಕಾರವನ್ನು ನೀಡುತ್ತದೆ ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ನಿರ್ದೇಶಕರ ಶ್ರೀ ದಿನೇಶ ಗುಪ್ತಾರವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಮೈಸೂರು ಶ್ರೀ ಸೂರ್ಯ ಸೌಹಾರ್ದ ಸಹಕಾರಿಯ ಶ್ರೀ ನಾರಾಯಣರಾವ್, ಸಹಾಯಕ ನಿಬಂಧಕ ಶ್ರೀ ರಂಗಸ್ವಾಮಿ, ಚಂದ್ರವನ ಆಶ್ರಮದ ವ್ಯವಸ್ಥಾಪಕ ಶ್ರೀ ಸಿ.ಆರ್.ಉಪಾಧ್ಯಾಯ ಮುಂತಾದವರು ವೇದಿಕೆಯಲ್ಲಿದ್ದರು.

ಪ್ರಾರಂಭದಲ್ಲಿ ಶ್ರೀಮತಿ ಸುವರ್ಣ ಕಲ್ಲೂರು ಇವರಿಂದ ಪ್ರಾರ್ಥನೆಯಾದ ನಂತರ ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ.ಕುಮಾರರವರು ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು. ಮೈಸೂರು ವಿಭಾಗದ ವಿಭಾಗಾಧಿಕಾರಿ ಶ್ರೀ ಶಿವಕುಮಾರ ಬಿರಾದಾರ ವಂದನೆ ಸಲ್ಲಿಸಿದರು.

**ಪ್ರಾಯೋಗಿಕಗಳು** : ತರಬೇತಿ ಅವಧಿಯಲ್ಲಿ ಆಡಳಿತ ಮಂಡಳಿ



ಸಭೆಯ ನೋಟೀಸ ಸಿದ್ಧಪಡಿಸುವುದು, ಸಭೆ ನಡೆಸುವುದು, ವಾರ್ಷಿಕ ಮಹಾಸಭೆಯ ನೋಟೀಸು ಸಿದ್ಧಪಡಿಸುವುದರ ಬಗ್ಗೆ ಪ್ರಾಯೋಗಿಕವನ್ನು ಉಪಪ್ರಧಾನ ವ್ಯವಸ್ಥಾಪಕ ಶ್ರೀ ನಾರಾಯಣ ಹೆಗಡೆಯವರು ನಡೆಸಿಕೊಟ್ಟರು. ತಾಳೆ ಪಟ್ಟಿ, ಜಮಾಖರ್ಚು ತಖ್ತೆ, ವ್ಯಾಪಾರ ತಖ್ತೆ ಲಾಭ ನಷ್ಟ ತಖ್ತೆ, ಆಸ್ತಿ ಜವಾಬ್ದಾರಿ ತಖ್ತೆ ಹಾಗೂ ಬ್ಯಾಂಕ್ ಸಮನ್ವಯ ಪಟ್ಟಿಯನ್ನು ಸಿದ್ಧಪಡಿಸುವ ಬಗ್ಗೆ ಪ್ರಾಯೋಗಿಕವನ್ನು ಸಹಪ್ರಧಾನ ವ್ಯವಸ್ಥಾಪಕಿ ಶ್ರೀಮತಿ ಆರ್. ಶೋಭರವರು ನಡೆಸಿಕೊಟ್ಟರು.

**ಮೌನಭೋಜನ** : ದಿನಾಂಕ 17-6-2015 ರಂದು ಸಂಜೆ 8-00 ಘಂಟೆಗೆ ಕಾರ್ಯಕ್ರಮವನ್ನು ಚಂದ್ರವನ ಆಶ್ರಮದ ಪರಮ ಪೂಜ್ಯ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿಗಳ ಸಾನಿಧ್ಯದಲ್ಲಿ ಏರ್ಪಡಿಸಲಾಗಿತ್ತು.



## ನೇಪಾಳ ಸಂತ್ರಸ್ಥರಿಗೆ ಸಹಾಯಹಸ್ತ

ಶಿವಮೊಗ್ಗ ಶ್ರೀ ರಾಮನುಜಾ ಸೌಹಾರ್ದ ಪತ್ತಿನ ಸಹಕಾರಿಯಿಂದ ರೂ. 10000/-ರೂಗಳನ್ನು ನೇಪಾಳ ಸಂತ್ರಸ್ಥರಿಗೆ ಸಹಾಯವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎಸ್.ಅಶ್ವತ್ಥರವರು ಜಿಲ್ಲಾಧಿಕಾರಿಯವರಿಗೆ ನೀಡುತ್ತಿರುವುದು. ಚಿತ್ರದಲ್ಲಿ ಸಹಕಾರಿಯ ನಿರ್ದೇಶಕರಾದ ಶ್ರೀ ಎಂಎಸ್.ಸುಂದರೇರಾಜ ಮುಂತಾದವರಿದ್ದಾರೆ.



ಎಸ್.ಎಸ್. ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ ಉದ್ಘಾಟನೆಯನ್ನು ಉಪನಿಬಂಧಕ ಕೆ.ಜೆ. ಕಾಂತರಾಜ್ ರವರು ನೆರವೇರಿಸಿ ಶುಭಕೋರಿದರು.

# ಸಮಾರೋಪ ಕಾರ್ಯಕ್ರಮ : ಅರ್ಥಪೂರ್ಣ ತರಬೇತಿ – ಯಶವಂತ ಡೊಂಗ್ರೆ



ದಿನಾಂಕ : 20–6–2015 ರಂದು ಬೆಳಗ್ಗೆ ನಡೆದ ಸಮಾರೋಪ ಕಾರ್ಯಕ್ರಮದಲ್ಲಿ ಸಮಾರೋಪ ಭಾಷಣಕಾರರಾಗಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಶ್ರೀ ಯಶವಂತ ಡೊಂಗ್ರೆಯವರು ಮಾತನಾಡಿ ಸಂಯುಕ್ತ ಸಹಕಾರಿಯು ನಡೆಸಿದ ಈ ವ್ಯಕ್ತಿತ್ವ ವಿಕಸನ ತರಬೇತಿ ಬಹಳ ಅರ್ಥಪೂರ್ಣವಾಗಿದೆ ಎಂದರು.

ಸೌಹಾರ್ದ ಸಹಕಾರಿಗಳಿಗಳ ಬೆಳವಣಿಗೆಗೆ ಪೂರ್ಣ ಪ್ರಯೋಜನಕಾರಿಯಾಗಿದೆ. ರಾಷ್ಟ್ರ ಅಂತರರಾಷ್ಟ್ರಮಟ್ಟದಲ್ಲಿ ಸಹಕಾರಿ ರಂಗದಲ್ಲಿ ಈ ರೀತಿಯ ವ್ಯಕ್ತಿತ್ವ ವಿಕಸನ ತರಬೇತಿ ಮತ್ತೊಂದಿಲ್ಲ. ತರಬೇತಿಯ ವಿಷಯಗಳು, ಸಂಪನ್ಮೂಲ ವ್ಯಕ್ತಿಗಳು ಅಧ್ಯಯನ ಸಾಹಿತ್ಯ, ತರಬೇತಿಯ ಪರಿಸರ, ವ್ಯವಸ್ಥೆಗಳು, ಪ್ರಾಯೋಗಿಕಗಳು, ವಿವಿಧ ಚಟುವಟಿಕೆಗಳು, ಅನೌಪಚಾರಿಕ ಸಭೆಗಳು ಎಲ್ಲವೂ ಸಂಯುಕ್ತ ಸಹಕಾರಿಯ ವೈಶಿಷ್ಟತೆಯನ್ನು ಎತ್ತಿ ತೋರಿಸುತ್ತವೆ. ಇವೆಲ್ಲವುಗಳ ಪರಿಣಾಮವಾಗಿ ವ್ಯಕ್ತಿಯ ವಿಕಸನ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

# ಯುವ ಜನತೆಗೆ ಸೌಹಾರ್ದ ಸಹಕಾರಿ ವ್ಯವಸ್ಥೆಯಲ್ಲಿ ಬೆಳವಣಿಗೆಗೆ ಪೂರ್ಣ ಅವಕಾಶ – ಹೆಚ್.ವಿ.ರಾಜೀವ




ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ ರವರು ಮಾತನಾಡಿ ದೇಶದಲ್ಲಿ ಸಹಕಾರ ಕ್ಷೇತ್ರ ಕಳೆದ 110 ವರ್ಷ ಗಳಿಂದ ಕಾರ್ಯ ನಿರ್ವಹಿಸುತ್ತಿದ್ದರೂ, ದೇಶದ ಅರ್ಥವ್ಯವಸ್ಥೆಗೆ ಸಾಕಷ್ಟು ಮಹತ್ವದ ಪಾತ್ರವನ್ನು ನಿರ್ವಹಿಸಿದ್ದರೂ, ಸಹ ಸಹಕಾರ ಕ್ಷೇತ್ರ ನಿರೀಕ್ಷಿಸಿದ ಮಟ್ಟಿಗೆ ಕಾರ್ಯನಿರ್ವಹಿಸುತ್ತಿಲ್ಲ, ಸಾಧನೆಯಾಗಿಲ್ಲ ಸಹಕಾರ ಕ್ಷೇತ್ರ ಯಶಸ್ವಿಯಾಗಿಲ್ಲ ಇದಕ್ಕೆ ಕಾರಣ ಸರಕಾರದ ಅತಿಯಾದ ಹಸ್ತಕ್ಷೇಪ ಎಂದು ವರದಿಗಳು ತಿಳಿಸಿದಾಗ, ಜಾರಿಗೆ ಬಂದದ್ದು ಈ ಸ್ವಾಯತ್ತ ಸಹಕಾರ ಮಾದರಿ ಕಾಯ್ದೆಗಳು. ಈ ಕಾಯ್ದೆಗಳಲ್ಲಿ ಸಹಕಾರಿ ಸಂಸ್ಥೆಗಳಿಗೆ ವ್ಯವಹಾರಿಕ ಸ್ವಾತಂತ್ರವಿದೆ. ಹೀಗಾಗಿ ಸಹಕಾರಿಗಳು ಸಂಸ್ಥೆಗಳ ಬೆಳವಣಿಗೆ ದೃಷ್ಟಿಯಿಂದ ಕ್ರಿಯಾಯೋಜನೆ ಸಿದ್ಧಪಡಿಸಿ ಕಾರ್ಯರೂಪಕ್ಕೆ ತರಲು ಸಾಕಷ್ಟು ಅವಕಾಶಗಳಿದೆ ಎಂದು ತಿಳಿಸಿದರು.





# ವ್ಯವಸ್ಥೆಯನ್ನು ಬಲಪಡಿಸಲು ಕೃಷಿ ಮಾಡುವುದು ಅಗತ್ಯ - ಎಸ್. ನಾಗರಾಜ



ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್. ನಾಗರಾಜರವರು ಮಾತನಾಡಿ ಪ್ರತಿಯೊಬ್ಬರೂ ಸಹ ತಮ್ಮ ಬದುಕನ್ನು ವ್ಯವಸ್ಥಿತವಾಗಿ ನಡೆಸಬೇಕಾದರೆ ತಮ್ಮೊಳಗೆ ಕೃಷಿಮಾಡ ಬೇಕಾಗುತ್ತದೆ. (ಆತ್ಮಶುದ್ಧೀಕರಣ ಪ್ರಕ್ರಿಯೆ) ಅದರಂತೆ ಸಹಕಾರಿ ವ್ಯವಸ್ಥೆಯನ್ನು ಉತ್ತಮ ವ್ಯವಸ್ಥೆಯನ್ನಾಗಿ ಮಾಡಬೇಕಾದರೆ ಈ ಕ್ಷೇತ್ರದಲ್ಲಿರುವವರೆಲ್ಲರಿಗೂ ಶಿಕ್ಷಣ ತರಬೇತಿ ನೀಡುವ ಮೂಲಕ ಶುದ್ಧೀಕರಣ ಗೊಳಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಈ ತರಬೇತಿಗೆ ಹೆಚ್ಚಿನ ಮಹತ್ವವಿದೆ ಎಂದು ತಿಳಿಸಿದರು.

ಕು. ರಮ್ಯ ಹಾಗೂ ಶ್ರೀ ಮಹೇಶ ಮಠಪತಿಯವರು ನಿರೂಪಣೆ ಮಾಡಿದರು. ಶ್ರೀಮತಿ ಸುವರ್ಣ ಕಲ್ಲೂರು ಹಾಗೂ ತಂಡದವರಿಂದ ಪ್ರಾರ್ಥನೆ. ಶ್ರೀ ಮೋಹನರವರಿಂದ ಸ್ವಾಗತದ ನಂತರ ಸಂಯುಕ್ತ ಸಹಕಾರಿಯ ಉಪಪ್ರದಾನ ವ್ಯವಸ್ಥಾಪಕ ಶ್ರೀ ವೈ.ಕುಮಾರರವರು ಪ್ರಾಸ್ತಾವಿಕ ಮಾಡಿದರು.

ಮೈಸೂರು ವಿಭಾಗೀಯ ಅಧಿಕಾರಿ ಶ್ರೀ ಶಿವಕುಮಾರ ಬಿರಾದಾರರವರು ಶಿಬಿರದ ವರದಿಯನ್ನು ಪ್ರಸ್ತುತ ಪಡಿಸಿದರು. ಶಿಬಿರಾರ್ಥಿಗಳು ಶಿಬಿರದ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಶಿಬಿರಾರ್ಥಿಗಳಿಗೆ ಪ್ರಶಸ್ತಿ ಪತ್ರಗಳನ್ನು ಹಾಗೂ ಬಹುಮಾನಗಳನ್ನು ನೀಡಲಾಯಿತು.

ಶಿಬಿರಾರ್ಥಿಗಳ ವತಿಯಿಂದ ಶ್ರೀ ಗುರುನಾಥ ಜಾಂತಿಕರ ಅಧ್ಯಕ್ಷರು, ಶ್ರೀ ಹೆಚ್.ವಿ.ರಾಜೀವ ಉಪಾಧ್ಯಕ್ಷರು, ಶ್ರೀ ವೈ. ಕುಮಾರ, ಶ್ರೀ ಶಿವಕುಮಾರ ಬಿರಾದಾರ ಮುಂತಾದವರುಗಳನ್ನು ಹಾಗೂ ಸಂಯುಕ್ತ ಸಹಕಾರಿಯ ವತಿಯಿಂದ ಶ್ರೀ ಟಿ.ಪಿ.ಶಿವಕುಮಾರ ಕಾರ್ಯದರ್ಶಿ ಚಂದ್ರವನ, ಶ್ರೀ ಚೆಲುವರಾಜ ಯೋಗಗುರುಗಳು ಶ್ರೀ ಯಶವಂತ ಡೊಂಗ್ರೆ ಮುಂತಾದವರುಗಳನ್ನು ಸನ್ಮಾನಿಸಲಾಯಿತು. ತರಬೇತಿಯಲ್ಲಿ 20 ಜಿಲ್ಲೆಯ 40 ಸೌಹಾರ್ದ ಸಹಕಾರಿಗಳ 55 ಪ್ರತಿನಿಧಿಗಳು ಭಾಗವಹಿಸಿದ್ದರು.

ಮೈಸೂರು ವಿಭಾಗೀಯ ಅಧಿಕಾರಿ ಶ್ರೀ ಶಿವಕುಮಾರ ಬಿರಾದಾರರವರು ವಂದನೆಗಳನ್ನು ಸಲ್ಲಿಸಿದರು.

## ಅಧ್ಯಯನ ಪ್ರವಾಸ





### ದೇವಸ್ಥಾನ ಹಾಗೂ ಪ್ರವಾಸಿ ತಾಣಗಳಿಗೆ ಭೇಟಿ :

ಶ್ರೀ ರಂಗನಾಥ ದೇವಾಲಯ, ಶ್ರೀರಂಗಪಟ್ಟಣ, ಶ್ರೀ ನಂಜುಂಡೇಶ್ವರ ದೇವಾಲಯ, ನಂಜನಗೂಡು, ನಿಮಿಷಾಂಬ ಶ್ರೀ ರಂಗಪಟ್ಟಣ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಪಕ್ಷಿಧಾಮ (ರಂಗನತಿಟ್ಟು), ಕೃಷ್ಣರಾಜಸಾಗರ ಅಣೆಕಟ್ಟು ಹಾಗೂ ಬೃಂದಾವನ ಗಾರ್ಡನ್‌ಗಳಿಗೆ ಭೇಟಿ ನೀಡಲಾಯಿತು.

# ವಿವಿಧ ಸಹಕಾರಿ ಸಂಸ್ಥೆಗಳಿಗೆ ಅಧ್ಯಯನ ತಂಡದ ಭೇಟಿ



ತರಬೇತಿಯ ಅವಧಿಯಲ್ಲಿ ಶಿಬಿರಾರ್ಥಿಗಳಿಗೆ ಅಧ್ಯಯನ ಪ್ರವಾಸವನ್ನು ಏರ್ಪಡಿಸಲಾಗಿತ್ತು. ಮೈಸೂರಿನ ಸಪ್ತಶ್ರೀ ಸೌಹಾರ್ದ ಸಹಕಾರಿ, ಕೌಸ್ತುಭ ಸೌಹಾರ್ದ ಸಹಕಾರಿ, ಮೈಸೂರು ಕ್ರೆಡಿಟ್ ಸೌಹಾರ್ದ ಸಹಕಾರಿ ಹಾಗೂ ಪಾಲಹಳ್ಳಿ ಕೃಷಿ ಪತ್ತಿ ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಿ ಅವುಗಳ ಕಾರ್ಯಚಟುವಟಿಕೆಗಳ ಬಗ್ಗೆ ಅದ್ಯಯನ ನಡೆಸಲಾಯಿತು.






## ಶಿಬಿರಾರ್ಥಿಗಳ ಅನಿಸಿಕೆಗಳು

- "ಉತ್ತಮ ತರಬೇತಿ ಶಿಬಿರದಲ್ಲ ಭಾಗವಹಿಸಿದ ಬಗ್ಗೆ ಸಂತೋಷವಾಗಿದೆ." ⏩ **ಮಲ್ಲು ದೇವಗೊಂಡ**
- "ಉಪಯುಕ್ತ ತರಬೇತಿ" ⏩ **ರಮ್ಯ ಎಮ್.ಜಿ.**
- "ಗೊಂದಲಗಳ ನಿವಾರಣೆಯಾಗಿದೆ. ಜೀವನಕ್ಕೊಂದು ಮಾರ್ಗವಾಗಿದೆ." ⏩ **ನಂದಿಬಸವ ಎನ್.ಎಸ್.**
- "ಎಲ್ಲ ರೀತಿಯಲ್ಲೂ ಉತ್ತಮವಾಗಿತ್ತು" ⏩ **ಶಿವರಾಜ ಪಾಟೀಲ್**
- "ಈ ತರಬೇತಿ ಎಲ್ಲ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗೂ ಲಭ್ಯವಾಗಬೇಕು." ⏩ **ವಿನಯ ಕೆ.ಎಸ್.**
- "ತರಬೇತಿ ಪರಿಸರ ಚೆನ್ನಾಗಿತ್ತು. ನಮಗೆ ಬೆಳಕು ತೋರಿಸಿದೆ." ⏩ **ಶಿವಲಿಂಗಪ್ಪ ಭೀಮಪ್ಪ ಸಂಗಮ.**
- ಉತ್ತಮ ತಳಪಾಯ ಒದಗಿಸುವ ತರಬೇತಿಯಾಗಿತ್ತು. ⏩ **ಹರ್ಷ ಎಮ್.ವಿ.**
- "ತುಂಬ ಪ್ರಯೋಜನವಾಗಿದೆ." ⏩ **ಶಿವಕುಮಾರ ಎ.**
- ಮಾನಸಿಕ ಪರಿವರ್ತನೆಗೆ ಸಹಕಾರಿಯಾಗಿದೆ. ⏩ **ಸಂಗಮೇಶ ಬಿ.ದೇಶಿ**
- ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿ. ಶಿಬಿರದ ಅವಧಿ ಹೆಚ್ಚಿಸಬೇಕು. ⏩ **ಪ್ರತಾಪ ಎನ್.ಡಿ.**
- ಸ್ಥಳ ಆಯ್ಕೆ ಉತ್ತಮ. ತರಬೇತಿ ಅತ್ಯುತ್ತಮ. ⏩ **ಉಮಾ ಆರ್.**
- ಸಂಪನ್ಮೂಲ ವ್ಯಕ್ತಿಗಳಿಗೆ ಇನ್ನೂ ಹೆಚ್ಚಿನ ಸಮಯ ಒದಗಿಸುವುದು ಅವಶ್ಯಕ. ⏩ **ಸಮರ್ಥ ಎಮ್.ಸಿ.**
- ಯುವ ಸಹಕಾರಿಗಳಿಗೆ ಉತ್ತಮ ಮಾರ್ಗದರ್ಶಿ ಈ ತರಬೇತಿ. ⏩ **ಪ್ರಿಯಾಂಕ.**
- ಸಹಕಾರಿಯ ಅಭಿವೃದ್ಧಿಗೆ ಪೂರಕವಿಷಯಗಳ ಬೋಧನೆಯಾಗಿದೆ. ⏩ **ಶಾರದಾ.**
- ತರಬೇತಿ ಅತ್ಯುತ್ತಮವಾಗಿತ್ತು. ಸಾಂಸ್ಕೃತಿಕ ಹಾಗೂ ಅನೌಪಚಾರಿಕಗಳಿಗೆ ಹೆಚ್ಚು ಸಮಯ ಬೇಕು. ⏩ **ಸುವರ್ಣ ಆರ್.ಕಲ್ಲೂರ.**
- ⏩ ನಾನೊಬ್ಬ ಉತ್ತಮ ವ್ಯಕ್ತಿಯಾಗಿ ನನ್ನ ಸಹಕಾರಿಯ ಉತ್ತಮ ಸಿಬ್ಬಂದಿಯಾಗಿ ರೂಪುಗೊಳ್ಳಲು ಸಹಕಾರಿಯಾಗಿದೆ. ⏩ **ಭರಮಪ್ಪ ಅ.ಪಾಟೀಲ್**
- ಉನ್ನತ ಮಟ್ಟದ ತರಬೇತಿ. ಇದಾಗಿತ್ತು. ⏩ **ಪರ್ವತರೆಡ್ಡಿ. ಪಾಟೀಲ್**
- ಅತ್ಯಂತ ಉತ್ಕೃಷ್ಠ ಪ್ರಯೋಜನಕಾರಿ ತರಬೇತಿ. ಮರೆಯಲಾಗದ ಅನುಭವ. ⏩ **ಜ್ಯೋತಿ**
- ಇಂತಹ ತರಬೇತಿ ಬೇರೆಲ್ಲೂ ನೋಡಿಲ್ಲ. ತರಬೇತಿಯಲ್ಲಿ ಭಾಗವಹಿಸಿರುವುದರಿಂದ ವ್ಯಕ್ತಿತ್ವ ವಿಕಸನ ಸಹಜವಾಗಿ ಆಗಿದೆ. ⏩ **ಶಹಾಪೂರ**
- ಮಾತು ಕಲಿಸುವ, ಶಿಸ್ತು ರೂಢಿಸುವ, ಹೊಸ ವಿಚಾರ ತಿಳಿಸುವ ತರಬೇತಿ ಇದಾಗಿತ್ತು. ⏩ **ಸುಪ್ರಿಯ**

# ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ (ನಿ)., ಉಡುಪಿ ಪ್ರವರ್ತಕರ ಸಭೆ

**ಉಡುಪಿ :** ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ಇದರ ಪ್ರಥಮ ಸರ್ವ ಸಹಕಾರಿಗಳ ಮಹಾಸಭೆಯು ಉಡುಪಿಯ ನೈವೇದ್ಯ ಹೋಟೇಲಿನ ಅನುಗ್ರಹ ಸಭಾಂಗಣದಲ್ಲಿ ದಿ : 18–06–2015ರಂದು ಒಕ್ಕೂಟದ ಮುಖ್ಯ ಪ್ರವರ್ತಕರಾದ ಶ್ರೀ ಮಂಜುನಾಥ ಎಸ್.ಕೆ. ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ಕಾರ್ಯಕ್ರಮಕ್ಕೆ ಉಡುಪಿ ಜಿಲ್ಲಾ ವ್ಯಾಪ್ತಿಯ ಸುಮಾರು 32 ಸೌಹಾರ್ದ ಸಹಕಾರಿಯ ಪ್ರತಿನಿಧಿಗಳು ಭಾಗವಹಿಸಿದ್ದು ಮತ್ತು ಈಗಾಗಲೇ 40 ಸಹಕಾರಿಗಳು ಒಕ್ಕೂಟದ ಸದಸ್ಯತ್ವವನ್ನು ಪಡೆದು ಅವರೂ ಕೈಜೋಡಿಸಿದ್ದು ಅವರಿಗೂ ಅಭಿನಂದಿಸಲಾಯಿತು. ಮುಂದೆ ಉಡುಪಿ ಜಿಲ್ಲಾ ವ್ಯಾಪ್ತಿಯ ಎಲ್ಲಾ ಸಹಕಾರಿಗಳು ಸದಸ್ಯತ್ವ ಪಡೆಯುವ ಆಶಾಭಾವನೆಯನ್ನು ಹೊಂದಿರುತ್ತೇನೆಂದು ತಿಳಿಸಿದರು.

ನಂತರ ಮಾತನಾಡಿದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರೂ ಹಾಗೂ ಒಕ್ಕೂಟದ



ಪ್ರವರ್ತಕರೂ ಆದ ಶ್ರೀ ಭಾಸ್ಕರ ಕಾಮತ್ ಇವರು ಮಾತನಾಡಿ ವಿಶೇಷ ಸಂದರ್ಭ, ಕಾನೂನು ತೊಡಕುಗಳಲ್ಲಿ ಮತ್ತು ಸಹಕಾರಿಗಳ ಸಿ.ಇ.ಓ, ಅಧ್ಯಕ್ಷರು ಮತ್ತು ನಿರ್ದೇಶಕರುಗಳಿಗೆ ಮಾಹಿತಿ ಶಿಬಿರ, ತರಬೇತಿಗಳನ್ನು ನೀಡುವುದು ಒಕ್ಕೂಟದ ಗುರಿಯಾಗಿರುತ್ತವೆ ಎಂದು ಈ ಸಂದರ್ಭದಲ್ಲಿ ಮಾಹಿತಿ ನೀಡಿದರು.

# ಅಕ್ಷಯ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಉದ್ಘಾಟನಾಸಮಾರಂಭ



ಅಕ್ಷಯ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ರಾಯಚೂರಿನ ಉದ್ಘಾಟನಾಸಮಾರಂಭವು ದಿ : 07/06/2015 ರಂದು ನೆರವೇರಿಸಲಾಗಿದ್ದು ಈ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀ ಗುರುನಾಥ್ ಜಾಂತೀಕರ್ ಅಧ್ಯಕ್ಷರು ಸಂಯುಕ್ತ ಸಹಕಾರಿ ಬೆಂಗಳೂರು ಇವರು ಆಗಮಿಸಿ ಸಂಘದ ಉದ್ಘಾಟನೆಯನ್ನು ನೆರವೇರಿಸಿದರು ಮತ್ತು ಸಂಘದ ಬೆಳವಣಿಗೆ ಕುರಿತು ಹಾರೈಸುತ್ತಾ ಇನ್ನು ಹೆಚ್ಚಿನ ರೀತಿಯಲ್ಲಿ ಸದಸ್ಯರುಗಳಿಗೆ ಉಪಯುಕ್ತವಾಗುವಂತೆ ಕೆಲವು ಯೋಜನೆಗಳನ್ನು ತರುವಂತೆ ತಿಳಿಸಿದರು.

ಕೌಸ್ತುಭ ಸೌಹಾರ್ದ ಸಹಕಾರಿ ನಿಯಮಿತ ಮೈಸೂರು ಇದರ 2 ನೇ ವರ್ಷದ ಸಾಮಾನ್ಯ ಸಭೆಯಲ್ಲಿ 10 ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.



## ಮೈಸೂರು ವಿಶ್ವವಿದ್ಯಾಲಯದ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಹಾಗೂ ಸೌಹಾರ್ದ ಸಹಕಾರಿ ಬೆಳವಣಿಗೆ ಹಾಗೂ ಸಾಧನೆಗಳ ಮೌಲ್ಯಮಾಪನ

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಕಾರ್ಯಾರಂಭ ಮಾಡಿ ವರ್ಷ 15 ಕಳೆದಿವೆ. ಸಂಯುಕ್ತ ಸಹಕಾರಿ ಕಾರ್ಯಾರಂಭಮಾಡಿ 14 ವರ್ಷಗಳು ಕಳೆದಿವೆ. ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳು ಜನಮನ್ನಣೆಗೆ ಸರಕಾರದ ಪ್ರಶಂಸೆಗೆ ಹಾಗು ಸಹಕಾರಿಗಳು ತೃಪ್ತಿಯನ್ನು ವ್ಯಕ್ತಪಡಿಸುತ್ತಿವೆಯಾದರೂ ಅಧಿಕೃತವಾಗಿ ಇವುಗಳ ಮೌಲ್ಯಮಾಪನದ ಅಗತ್ಯತೆಯನ್ನು ಮನಗಂಡು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಇವುಗಳ ಮೌಲ್ಯಮಾಪನವನ್ನು ಮಾಡಲು ಮೈಸೂರು ವಿಶ್ವ ವಿದ್ಯಾಲಯಕ್ಕೆ ವಹಿಸಿಕೊಡಲು ತೀರ್ಮಾನಿಸಲಾಗಿದೆ.

ಮೈಸೂರು ವಿಶ್ವವಿದ್ಯಾಲಯದವರೂ ಒಪ್ಪಿದ್ದಾರೆ. ಮೌಲ್ಯಮಾಪನ ಪ್ರಕ್ರೀಯೆಯ ಪ್ರಾಥಮಿಕ ಶಿಷ್ಠಾಚಾರಗಳು ಮುಗಿದಿವೆ. ಈ ತಂಡದ ನೇತ್ರವನ್ನು ಮೈಸೂರು ವಿಶ್ವ ವಿದ್ಯಾಲಯದ ಥರ್ಡ ಸೆಕ್ಟರ ರೀಸರ್ಚ ಸೆಂಟರಿನ ಸಂಯೋಜಕರಿಗೆ ವಹಿಸಲಾಗಿದೆ. ಅವರ ಜೊತೆಯಲ್ಲಿ



ಕೆಲವು ಪ್ರಾಧ್ಯಾಪಕರು ಹಾಗೂ ಅಧಿಕಾರಿಗಳು ಇರುತ್ತಾರೆ. ಹಲವಾರು ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಲಿದ್ದಾರೆ. ಅಧ್ಯಯನ ಮಾಡಲಿದ್ದಾರೆ. ಕಾರ್ಯಚಟುವಟಿಕೆಗಳ ಮೌಲ್ಯಮಾಪನ ನಡೆಸಲಿದ್ದಾರೆ. ರಾಜ್ಯದ ಸೌಹಾರ್ದ ಸಹಕಾರಿಗಳು ಈ ತಂಡಕ್ಕೆ ಎಲ್ಲ ವಿಧವಾದ ಸಹಕಾರ ನಿಡಲು ಕೋರಿದೆ.

### ಸಂಯುಕ್ತ ಸಹಕಾರಿ ಸಾಮಾನ್ಯ ಸಭೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ 14ನೇ ಸಾಮಾನ್ಯ ಸಭೆಯನ್ನು ದಿನಾಂಕ : 20.08.2015 ರಂದು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

### ಯಶಸ್ವಿನಿ ಯೋಜನೆ ಅವಧಿ ವಿಸ್ತರಣೆ

ಯಶಸ್ವಿನಿ ನಗರ ಆರೋಗ್ಯ ರಕ್ಷಣಾ ಯೋಜನೆಯನ್ನು ದಿನಾಂಕ : 31–7–2015ರವರೆಗೆ ವಿಸ್ತರಿಸಿ ಸರ್ಕಾರ ಆದೇಶ ಹೊರಡಿಸಿದೆ.

### ಹಳೇ ನೋಟು ದಿನಾಂಕ ವಿಸ್ತರಣೆ

2005ರೊಳಗಿನ 500 ಹಾಗೂ 1000 ರೂ.ಗಳ ಹಳೇ ನೋಟುಗಳನ್ನು ವಾಪಸ್ ಪಡೆಯಲು ರಿಸರ್ವ್ ಬ್ಯಾಂಕ್ ಜೂ. 30ರವರೆಗೆ ನೀಡಿದ್ದ ಗಡುವನ್ನು 2015ರ ಡಿಸೆಂಬರ್ 31 ರವರೆಗೆ ವಿಸ್ತರಿಸಿದೆ.

## ಶ್ರೀ ವೇಮನ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ನಿ ಬೆಂಗಳೂರು : 13ನೇ ವಾರ್ಷಿಕ ಮಹಾಸಭೆ

ಶ್ರೀ ವೇಮನ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ನಿ ಬೆಂಗಳೂರು : 13 ನೆ ವಾರ್ಷಿಕ ಮಹಾಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ವಿ.ರೆಡ್ಡಿಯವರ ಅಧ್ಯಕ್ಷತೆಯಲ್ಲಿ 28–6–2015ರಂದು ನಗರದ ವಿಲ್ಸನ್ ಗಾರ್ಡನ ಹೊಂಬೆಗೌಡಾ ಬಾಲಕರ ಪ್ರೌಢಶಾಲಾ ಸಭಾಂಗಣದಲ್ಲಿ ನಡೆದು 2014–15 ನೇ ಸಾಲಿನ ಚಟುವಟಿಕೆಗಳ ಪರಿಶೀಲನೆ ಹಾಗೂ ಅನುಮೋದನೆಯಾಗಿ 2015–16 ನೇ ಸಾಲಿನ ಕ್ರಿಯಾಯೋಜನೆಯನ್ನು ಅನುಮೋದಿಸಿತು.

ಸಹಕಾರಿಯು 2014–15 ನೇ ಸಾಲಿಗೆ 1,12,21,630.62 ರೂಗಳ ಲಾಭವನ್ನು ಮಾಡಿ ಕಳೆದ ಸಾಲಿಗಿಂತ ಶೇಕಡಾ 18.9 ರಷ್ಟು ಹೆಚ್ಚುವರಿ ಲಾಭ ಮಾಡಿದೆ. ಸಹಕಾರಿಯಲ್ಲಿ 2000ಕ್ಕೂ ಹೆಚ್ಚು ಸದಸ್ಯರು 2.17 ಕೋಟಿ ಶೇರು ಬಂಡವಾಳ, 4.21 ಕೊಟಿ ಕಾಯ್ದಿರಿಸಿದ ನಿಧಿಗಳು, 42.70 ಕೋಟಿ ರೂಗಳ ಠೇವಣಿಗಳು, 17.85 ಕೋಟಿ ರೂಗಳ ಹೂಡಿಕೆಗಳು, 50.55 ಕೋಟಿರೂಗಳ ಸಾಲ ನೀಡಲಾಗಿದೆ. ಸದಸ್ಯರಿಗೆ ಶೇಕಡಾ 12% ಡಿವಿಡೆಂಡ್ ನೀಡಿದೆ. ಸಹಕಾರಿಯು ಸಂಪೂರ್ಣ ಗಣಕೀಕರಣ ಹೊಂದಿದೆ.

# ರಾಷ್ಟ್ರೀಯ ಸಹಕಾರಿ ಯೂನಿಯನ್ ಅಧ್ಯಕ್ಷ ಶ್ರೀ ಚಂದ್ರಪಾಲಸಿಂಗ್ ಯಾದವ್ ಸಂಯುಕ್ತ ಸಹಕಾರಿಗೆ ಭೇಟಿ

## ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಹಾಗೂ ಸಾಧನೆಗಳ ಬಗ್ಗೆ ಮೆಚ್ಚುಗೆ




ರಾಷ್ಟ್ರೀಯ ಸಹಕಾರ ಯೂನಿಯನ್ ಅಧ್ಯಕ್ಷ ಡಾ|| ಚಂದ್ರಪಾಲಸಿಂಗ್‌ಯಾದವ ಎಂ.ಪಿ ಇವರು ದಿನಾಂಕ 19 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕಚೇರಿಗೆ ಭೇಟಿ ನೀಡಿ ರಾಜ್ಯದ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳನ್ನು ತಿಳಿದುಕೊಂಡರಲ್ಲದೆ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳನ್ನು ಅಧ್ಯಯನಮಾಡಿ ಸಹಕಾರ ಕ್ಷೇತ್ರದಲ್ಲಿ ಇದೊಂದು ಉತ್ತಮ ಬೆಳವಣಿಗೆ ಈ ವ್ಯವಸ್ಥೆ ಎಲ್ಲ ರಾಜ್ಯಗಳಲ್ಲಿ ಬರಬೇಕು ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರರವರು ಶ್ರೀಯುತರನ್ನು ಬರಮಾಡಿಕೊಂಡರು. ಈ ಸಮಯದಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಎಸ್.ಆರ.ಸತೀಶಚಂದ್ರ , ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಶ್ರೀ ಎಮ್.ಬಿ.ಕಲಾಲ, ಶ್ರೀ ಸಣ್ಣಸೂಗಪ್ಪ , ಶ್ರೀಮತಿ ಮಂಜುಳಾ ಪಾಟೀಲ್, ಶ್ರೀ ಶಾಂತಿನಾಥ ಪಂಡಿತ, ಶ್ರೀ ಹೆಚ್.ವಿ. ರವಿಕುಮಾರ, ಶ್ರೀ ಭಾಸ್ಕರ ಕಾಮತ, ಶ್ರೀ ಆಂಜನೇಯ ಗುಪ್ತಾ, ಶ್ರೀ ದಿನೇಶ ಗುಪ್ತಾ, ಶ್ರೀ ನಾಗೇಂದ್ರ ಗುಪ್ತಾ, ಶ್ರೀ ರಮೇಶ, ಶ್ರೀ ಬಿ.ಗಂಗಾಧರಯ್ಯ, ಶ್ರೀ ನಾಗರಾಜ, ಶ್ರೀ ಜಿ.ಎನ್.ಪಾಟೀಲ್, ಶ್ರೀ ಶ್ರೀಕಾಂತ ಹತನುರೆ, ಶ್ರೀ ಜಿ.ಎಸ್.ಮಹಾಬಲ,






## ಅಧ್ಯಕ್ಷರಾಗಿ ಆಯ್ಕೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್‌ರವರು ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್‌ನಿನ ಅಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ.

## ಉಪಾಧ್ಯಕ್ಷರಾಗಿ ಆಯ್ಕೆ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ್ ಹೆಗಡೆ ಕಾಗೇರಿಯವರು ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

## ಜುಲೈ ಮಾಹೆಯ ತರಬೇತಿಗಳು

ದಿನಾಂಕ 20 ರಿಂದ 26 ಜುಲೈ 2015 ರವರೆಗೆ ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆ, ಬೆಂಗಳೂರಿನಲ್ಲಿ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕ್‌ಗಳ ಹಿರಿಯ/ಕಿರಿಯ ಅಧಿಕಾರಿಗಳು/ಲೆಕ್ಕಿಗರು ಹಾಗೂ ಹೊಸದಾಗಿ ನೇಮಕಗೊಂಡಿರುವ ಸಿಬ್ಬಂದಿಯವರಿಗಾಗಿ ಏರ್ಪಡಿಸಲಾಗಿದೆ. ಈ ಕಾರ್ಯಕ್ರಮದಲ್ಲಿ 50 ಜನರು ಭಾಗವಹಿಸಲು ಅವಕಾಶವಿದೆ. ಒಂದು ಸೌಹಾರ್ದ ಸಹಕಾರಿ ಬ್ಯಾಂಕಿನಿಂದ ಕನಿಷ್ಠ 2 ರಿಂದ ಗರಿಷ್ಠ 5 ಸಿಬ್ಬಂದಿಯವರನ್ನು ಕಳುಹಿಸುವುದು. ತರಬೇತಿ ಪಡೆದಿರುವುದಕ್ಕೆ ಪ್ರಮಾಣ ಪತ್ರ ನೀಡಲಾಗುವುದು. ತಮ್ಮ ಹೆಸರನ್ನು ನೊಂದಾಯಿಸಲು ಕೊನೆಯ ದಿನಾಂಕ 15.07.2015 ಆಗಿರುತ್ತದೆ.

## ದಿ ಪಾವಗಡ ಸೌಹಾರ್ದ ವಿವಿದೋದ್ದೇಶ ಸಹಕಾರಿಯ ನೂತನ ಶಾಖೆ ಉದ್ಘಾಟನೆ



ದಿ ಪಾವಗಡ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ನೂತನವಾಗಿ ರಾಮನಗರದಲ್ಲಿ ಶಾಖೆಯನ್ನು ಶ್ರೀ ಜಿ.ಟಿ ದೇವೇಗೌಡ ಶಾಸಕರು ಅಧ್ಯಕ್ಷರು ರಾಜ್ಯ ಸಹಕಾರಿ ಮಹಾಮಂಡಳ ಉದ್ಘಾಟಿಸಿದರು. ಚಿತ್ರದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್. ವಿ.ರಾಜೀವ್, ಪಾವಗಡ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಮುಂತಾದವರು ಇದ್ದಾರೆ.

... ಹಿಂದಿನ ಪುಟದಿಂದ

ಶ್ರೀ ಜಿ. ನಂಜನಗೌಡ, ಶ್ರೀ ಜಯಾನಂದ ಜಾಧವ, ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ನಿರ್ದೇಶಕ ಶ್ರೀ ವಸಂತ ನಾಯಕ, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ.ಜಿ.ಪಾಟೀಲ್ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಶ್ರೀಯುತರಿಗೆ ಶಾಲು ಹೊದಿಸಿ ಹಾರ ಹಾಕಿ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

### ಮನವಿ ಸಲ್ಲಿಕೆ

1. ದೇಶದ ಸಹಕಾರ ಚಳುವಳಿಯ ಆರೋಗ್ಯಕರ ಬೆಳವಣಿಗೆಯ ದೃಷ್ಟಿಯಿಂದ ಸಹಕಾರಿ ಸಂಸ್ಥೆಗಳಿಗೆ ಆದಾಯ ತೆರಿಗೆ ವಿಷಯದಲ್ಲಿ ಆಗುತ್ತಿರುವ ತೊಂದರೆಗಳನ್ನು ನಿವಾರಿಸಲು ಸಂಬಂದಿಸಿದವರನ್ನು ಒತ್ತಾಯಿಸುವಂತೆ ಹಾಗು ಮುಂಬರುವ ದಿನಗಳಲ್ಲಿ ನೇರ ತೆರಿಗೆ ಪದ್ಧತಿ ಜಾರಿಗೆ ಬರಬಹುದಾದ ಸಂದರ್ಭದಲ್ಲಿ ಸಹಕಾರ ಕ್ಷೇತ್ರವನ್ನು ಹೊರತುಪಡಿಸಿ ಜಾರಿಗೊಳಿಸಲು ಕ್ರಮವಿಡುವಂತೆ ಕೇಂದ್ರವನ್ನು ಒತ್ತಾಯಿಸಲು ಕ್ರಮವಿಡುವಂತೆ ಮನವಿ.
2. ದೇಶದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ (ಸ್ವಾಯತ್ತ (ಲಿಬರಲ್) ಸಹಕಾರಿ ಕಾಯ್ದೆಯಡಿ) ಕಾರ್ಯನಿರ್ವಹಿಸುವ ಸಹಕಾರ ಸಂಸ್ಥೆಗಳಿಗೆ ರಾಷ್ಟ್ರೀಯ ಸಹಕಾರ ಯೂನಿಯನ್ ಆಡಳಿತ ಮಂಡಳಿಯಲ್ಲಿ ಸ್ಥಾನ ಒದಗಿಸಿ ಸ್ವಾಯತ್ತ ಸಹಕಾರಿಗಳ ಸಮಸ್ಯೆಗಳಿಗೆ ರಾಷ್ಟ್ರಮಟ್ಟದಲ್ಲಿ ಸ್ಪಂದಿಸುವ ವ್ಯವಸ್ಥೆಯನ್ನು ಮಾಡಿಕೊಡಲು ಮನವಿ.
3. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗೆ ರಾಷ್ಟ್ರೀಯ ಸಹಕಾರ ಯೂನಿಯನ್ನಿನ ಸದಸ್ಯತ್ವ ನೀಡಲು ಮನವಿ.

ಈ ಮನವಿಗಳನ್ನು ಸ್ವೀಕರಿಸಿ ಮಾತನಾಡಿದ ಶ್ರೀಯುತರು ಇವೆಲ್ಲವುಗಳನ್ನು ಪರಿಶಿಲೀಸಿ ಸೂಕ್ತ ಕ್ರಮವಿಡುವುದಾಗಿ ಭರವಸೆ ನೀಡಿದರು. ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಭಾಸ್ಕರ ಹೆಗಡೆಯವರು ವಂದನೆ ಸಲ್ಲಿಸಿದರು.

# ಉಡುಪಿಯ ಜನಹಿತ ಸೌಹಾರ್ದ ಸಹಕಾರಿ ನಿ. ನೂತನ ಶಾಖೆಯ ಉದ್ಘಾಟನೆ

ಜನಹಿತ ಸೌಹಾರ್ದ ಸಹಕಾರಿ ನಿಯಮಿತ ಉಡುಪಿ ಇದರ ನೂತನ ಪೇತ್ರಿ ಶಾಖೆಯು ದಿನಾಂಕ 24.05.2015ರಂದು ಉಡುಪಿ ಮಾಜಿ ಶಾಸಕರಾದ ಶ್ರೀ ಕೆ.ರಘುಪತಿ ಭಟ್‌ರವರು ಉದ್ಘಾಟಿಸಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ.ಬೆಂಗಳೂರು ಇದರ ನಿರ್ದೇಶಕರಾದ ಭಾಸ್ಕರ ಕಾಮತ್‌ರವರು ಭದ್ರತಾಕೋಶವನ್ನು ಉದ್ಘಾಟಿಸಿ ಶುಭ ಹಾರೈಸಿದರು.



# ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರ (NCCE), ನವದೆಹಲಿಯಲ್ಲಿ ತರಬೇತಿ

ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರ, ನವದೆಹಲಿ (NCCE – National Centre For Co operative Education) ಇದು ದಿನಾಂಕ: 08 ರಿಂದ 12 ಜೂನ್ 2015ರವರೆಗೆ ಐದು ದಿನಗಳ ತರಬೇತಿಯನ್ನು ನವದೆಹಲಿಯಲ್ಲಿ ಆಯೋಜಿಸಿತ್ತು. ಸಹಕಾರ ಕ್ಷೇತ್ರದಲ್ಲಿ ಪರಿಣಾಮಕಾರಿ ಶಿಕ್ಷಣ ನೀಡುವ ವಿಧಾನಗಳ ಬಗ್ಗೆ ತರಬೇತಿಯು ಕೇಂದ್ರೀಕೃತವಾಗಿತ್ತು. ಸಂಯುಕ್ತ ಸಹಕಾರಿಯಲ್ಲಿ ತರಬೇತುದಾರರ ತಂಡವನ್ನು ಸಿದ್ಧಪಡಿಸಬೇಕೆಂಬ ಅಪೇಕ್ಷೆಯ ಮೇರೆಗೆ ಈ ತರಬೇತಿಗೆ ಸಂಯುಕ್ತ ಸಹಕಾರಿಯ ಎಂಟು ಜನ ಸಿಬ್ಬಂದಿಗಳನ್ನು ತರಬೇತಿಗಾಗಿ ಕಳುಹಿಸಲಾಗಿತ್ತು. ತರಬೇತಿಯಲ್ಲಿ ಪಂಜಾಬ, ಹಿಮಾಚಲ ಪ್ರದೇಶ, ಅಸ್ಸಾಂ, ಮಧ್ಯಪ್ರದೇಶ, ಪಾಂಡಿಚೇರಿ, ಕರ್ನಾಟಕ, ಗುಜರಾತ್, ಗೋವಾ ಹಾಗೂ ನವದೆಹಲಿಯ ಸಹಕಾರಿ ಶಿಕ್ಷಣ ಅಧಿಕಾರಿಗಳು ಭಾಗವಹಿಸಿದ್ದರು.

ತರಬೇತಿಯ ಸಂದರ್ಭದಲ್ಲಿ ವಿವಿಧ ರಾಜ್ಯಗಳ ಸಹಕಾರ ಕ್ಷೇತ್ರದ ಪ್ರಸಕ್ತ ವಿದ್ಯಮಾನಗಳ ಬಗ್ಗೆ ಮಾಹಿತಿ ವಿನಿಮಯ ಮಾಡಿಕೊಳ್ಳಲಾಯಿತು. ಕರ್ನಾಟಕದ ಸಹಕಾರ ಕ್ಷೇತ್ರ ಹಾಗೂ ಸೌಹಾರ್ದ ಸಹಕಾರ ಕ್ಷೇತ್ರದ ಬಗ್ಗೆ ಸಂಯುಕ್ತ ಸಹಕಾರಿಯ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ ಕೆ ಇವರು ವಿಷಯ ಮಂಡಿಸಿದರು. ಸ್ವಾಯತ್ತ ಕಾಯ್ದೆ ಕರ್ನಾಟಕದಲ್ಲಿ ಯಶಸ್ವಿಯಾಗಿರುವ ಬಗ್ಗೆ ಹಾಗೂ ಸಹಕಾರ ಕ್ಷೇತ್ರದಲ್ಲೆ ವಿಶಿಷ್ಠವಾದ ಶಾಸನಬದ್ಧ ನಿಯಂತ್ರಣಾತ್ಮಕ ಸಂಸ್ಥೆಯಾದ 'ಸಂಯುಕ್ತ ಸಹಕಾರಿ'ಯ ರಚನೆ ಹಾಗೂ ಕಾರ್ಯವಿಧಾನಗಳ ಬಗ್ಗೆ ವಿಸ್ತೃತವಾಗಿ ಚರ್ಚಿಸಲಾಯಿತು. ವಿವಿಧ ರಾಜ್ಯಗಳಿಂದ ಭಾಗವಹಿಸಿದ್ದ ಪ್ರತಿನಿಧಿಗಳು ಸೌಹಾರ್ದ ಸಹಕಾರ ಕ್ಷೇತ್ರದ ಬೆಳವಣಿಗೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.



# ಮಂಗಳೂರು ಸೌಹಾರ್ದ ಸಹಕಾರಿ ನಿ., ದ್ವಿತೀಯ ಬಾರಿ ಅವಿರೋದ ಆಯ್ಕೆ



ಶ್ರೀ ಕೆ. ಭಾಸ್ಕರ್‌ರಾವ್
ಅಧ್ಯಕ್ಷರು

ಮಂಗಳೂರು ಸೌಹಾರ್ದ ಸಹಕಾರಿ ನಿ., ದ್ವಿತೀಯ ಬಾರಿಗೆ ಅಧ್ಯಕ್ಷರಾಗಿ ಶ್ರೀ ಕೆ. ಭಾಸ್ಕರ್ ರಾವ್ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಪಿ.ನಾರಾಯಣ ಆಳ್ವ ಬಾರಿ ಅವಿರೋದ ಆಯ್ಕೆಯಾಗಿದ್ದಾರೆ.



ಶ್ರೀ ಪಿ. ನಾರಾಯಣ ಆಳ್ವ
ಉಪಾಧ್ಯಕ್ಷರು

# ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು (ತಿದ್ದುಪಡಿ) 2014

ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ಕ್ಕೆ 2014ರಲ್ಲಿ ತಿದ್ದುಪಡಿಯ ನಂತರ ಕರ್ನಾಟಕ ಸರಕಾರವು ನಿಯಮಗಳಿಗೂ ತಿದ್ದುಪಡಿಮಾಡಿ ಆದೇಶ ಹೊರಡಿಸಿದೆ. ಸೌಹಾರ್ದ ಸಹಕಾರಿಗಳ ಅನುಕೂಲಕ್ಕಾಗಿ ನಿಯಮಾವಳಿಗಳನ್ನು ಯಥಾವತ್ತಾಗಿ ಪ್ರಕಡಿಸಿದೆ. ಈ ತಿದ್ದುಪಡಿ ನಿಯಮಗಳನ್ನು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ಜೊತೆಗೆ ಓದಿಕೊಳ್ಳುವುದು.

*RNI No. KARBIL/2001/47147*

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ- IV-A | ಬೆಂಗಳೂರು, ಶನಿವಾರ, ಜೂನ್ ೨೦, ೨೦೧೫ (ಜ್ಯೇಷ್ಠ ೩೦, ಶಕ ವರ್ಷ ೧೯೩೭) | ನಂ. ೭೧೧ |
| *Part– IV-A* | *Bengaluru, Saturday, June 20, 2015 (Jyeishta 30, Shaka Varsha 1937)* | *No. 711* |

ಸಹಕಾರ ಸಚಿವಾಲಯ

ಅಧಿಸೂಚನೆ

**ಸಂಖ್ಯೆ: ಸಿಒ 6 ಸಿಎಲ್‌ಎಂ 2015, ಬೆಂಗಳೂರು, ದಿನಾಂಕ: 20.06.2015**

ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2015ರ ಕರಡನ್ನು ಅಧಿಸೂಚನೆ ಸಂಖ್ಯೆ: ಸಿಒ 06 ಸಿಎಲ್‌ಎಂ 2015, ದಿನಾಂಕ: 05.03.2015ರ ಮೂಲಕ ಕರ್ನಾಟಕ ರಾಜ್ಯ ಪತ್ರದ ವಿಶೇಷ ಪತ್ರಿಕೆಯ ಭಾಗ–IVA ಸಂಖ್ಯೆ 201 ದಿನಾಂಕ: 05.03.2015ರಲ್ಲಿ ಪ್ರಕಟಿಸಿದ್ದು, ಸದರಿ ತಿದ್ದುಪಡಿಗಳಿಂದ ಭಾದಿತವಾಗಬಹುದಾದ ವ್ಯಕ್ತಿಗಳಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ;

ಮತ್ತು ದಿನಾಂಕ: 05.03.2015ರ ವಿಶೇಷ ರಾಜ್ಯಪತ್ರವನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ ಸದರಿ ಕರಡು ನಿಯಮಗಳ ಬಗ್ಗೆ ನಿಗದಿತ ಅವಧಿಯೊಳಗೆ ಸ್ವೀಕೃತವಾದ ಆಕ್ಷೇಪಣೆ ಮತ್ತು ಸಲಹೆಗಳನ್ನು ಪರಿಗಣಿಸಿರುವುದರಿಂದ;

ಈಗ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 (2000ದ ಕರ್ನಾಟಕ ಅಧಿನಿಯಮ ಸಂಖ್ಯೆ: 17) ಇದರ ಪ್ರಕರಣ 71ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ.

<u>ನಿಯಮಗಳು</u>

1. **ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು, 2015 ಎಂದು ಕರೆಯತಕ್ಕದ್ದು.

(2) ಇವು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ನಿಯಮ 2 ರ ತಿದ್ದುಪಡಿ.–** ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು, 2004 (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗುತ್ತದೆ.) ರ ನಿಯಮ, 2 ರಲ್ಲಿ,–

(i) ಖಂಡ (ಜಿ–2) ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ,–

"(ಜಿ–2) "ಚುನಾವಣಾಧಿಕಾರಿ" ಎಂದರೆ ಸಹಕಾರ ಚುನಾವಣಾ ಪ್ರಾಧಿಕಾರದಿಂದ ಆ ಜಿಲ್ಲೆಗಾಗಿ, ಪ್ರಾಂತಕ್ಕಾಗಿ, ರಾಜ್ಯಕ್ಕಾಗಿ ಚುನಾವಣಾಧಿಕಾರಿಯಾಗಿ ನೇಮಿಸಲ್ಪಟ್ಟ ಒಬ್ಬ ಅಧಿಕಾರಿ.

ಪರಂತು, ಸಹಕಾರ ಇಲಾಖೆಯ ಸಂಬಂಧಿಸಿದ ಕಾರ್ಯವ್ಯಾಪ್ತಿಯ ಸಹಾಯಕ ನಿಬಂಧಕರು, ಉಪನಿಬಂಧಕರು ಅಥವಾ ಜಂಟಿ ನಿಬಂಧಕರನ್ನು ಚುನಾವಣಾಧಿಕಾರಿಯನ್ನಾಗಿ ನೇಮಿಸತಕ್ಕದ್ದಲ್ಲ."

(i) ಖಂಡ (ಜಿ–3) ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ,–

"(ಜಿ–3) "ರಿಟರ್ನಿಂಗ್ ಅಧಿಕಾರಿ" ಎಂದರೆ ಚುನಾವಣಾ ಪ್ರಾಧಿಕಾರ ಅಥವಾ ಚುನಾವಣಾಧಿಕಾರಿಯಿಂದ ಆಯಾ ಸಹಕಾರ ಸಂಘಗಳಿಗೆ ರಿಟರ್ನಿಂಗ್ ಅಧಿಕಾರಿ ಎಂಬುದಾಗಿ ನೇಮಿಸಲ್ಪಟ್ಟ ರಾಜ್ಯ ಸರ್ಕಾರದ ಅಥವಾ ಸ್ಥಳೀಯ ಸಂಸ್ಥೆಯ ಒಬ್ಬ ಅಧಿಕಾರಿ ಮತ್ತು ರಿಟರ್ನಿಂಗ್ ಅಧಿಕಾರಿಯ ಕರ್ತವ್ಯಗಳನ್ನು ನಿರ್ವಹಿಸುವ ಒಬ್ಬ ಸಹಾಯಕ ರಿಟರ್ನಿಂಗ್ ಅಧಿಕಾರಿಯನ್ನು ಒಳಗೊಂಡಿರುತ್ತದೆ.

ಪರಂತು, ಸಹಕಾರ ಇಲಾಖೆಯ ಸಂಬಂಧಿಸಿದ ಕಾರ್ಯವ್ಯಾಪ್ತಿಯ ಸಹಾಯಕ ನಿಬಂಧಕರು, ಉಪನಿಬಂಧಕರು ಅಥವಾ ಜಂಟಿ ನಿಬಂಧಕರನ್ನು ರಿಟರ್ನಿಂಗ್ ಅಧಿಕಾರಿಯನ್ನಾಗಿ ನೇಮಿಸತಕ್ಕದ್ದಲ್ಲ."

3. **ಸಹಕಾರ ಚುನಾವಣಾ ಪ್ರಾಧಿಕಾರದ ಪ್ರತಿಯೋಜನೆ.–** ಸದರಿ ನಿಯಮಗಳಲ್ಲಿ ಎಲ್ಲೆಲ್ಲಿ ಸಹಕಾರ ಚುನಾವಣಾ ಆಯೋಗ ಎಂಬ ಪದವಿದೆಯೋ ಆ ಪದಕ್ಕೆ ಬದಲಾಗಿ "ಸಹಕಾರ ಚುನಾವಣಾ ಪ್ರಾಧಿಕಾರ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

4. **ನಿಯಮ 3ಎ ಯ ಹೊಸ ಸೇರ್ಪಡೆ.–** ಸದರಿ ನಿಯಮಗಳ, 3ನೇ ನಿಯಮದ ನಂತರ ಈ ಕೆಳಕಂಡ ನಿಯಮವನ್ನು ಸೇರಿಸತಕ್ಕದ್ದು, ಎಂದರೆ:–

**"3ಎ,–ಉಪವಿಧಿ ತಿದ್ದುಪಡಿಗೆ ಶುಲ್ಕ.–** ಪ್ರಕರಣ 11ರ ಪ್ರಕಾರ ಉಪವಿಧಿ ತಿದ್ದುಪಡಿಗೆ ಪ್ರಸ್ತಾವೆ ಸಲ್ಲಿಸುವ ಸಂದರ್ಭದಲ್ಲಿ ಕೆಳಗೆ ನಿರ್ದಿಷ್ಟಪಡಿಸಿರುವ ಶುಲ್ಕವನ್ನು ರಿಜಿಸ್ಟ್ರಾರನ ಹೆಸರಿಗೆ ಪಾವತಿ ಮಾಡಿದ ಬಗ್ಗೆ ಖಜಾನೆಯ ಚಲನ್ ಅಥವಾ ಡಿಮ್ಯಾಂಡ್ ಡ್ರಾಫ್ಟನ್ನು ಲಗತ್ತಿಸತಕ್ಕದ್ದು, ಎಂದರೆ,–

| | ಸಹಕಾರಿಯ ವ್ಯಾಪ್ತಿ | ಪಾವತಿಸಬೇಕಾದ ಮೊತ್ತ |
|---|---|---|
| | ಸಹಕಾರಿಯ ಕಾರ್ಯಾಚರಣೆಯ ಕ್ಷೇತ್ರವು | |
| (1) | ತಾಲ್ಲೂಕಿಗಿಂತ ಕಡಿಮೆ ವ್ಯಾಪ್ತಿ | ರೂ.400–00 |
| (2) | ತಾಲ್ಲೂಕು ಮತ್ತು ತಾಲ್ಲೂಕಿಗಿಂತ ಹೆಚ್ಚಾಗಿ ಆದರೆ ಜಿಲ್ಲೆಗಿಂತ ಕಡಿಮೆ ವ್ಯಾಪ್ತಿ | ರೂ.1000–00 |
| (3) | ಜಿಲ್ಲೆ ಮತ್ತು ಜಿಲ್ಲೆಗಿಂತ ಹೆಚ್ಚಾದ ವ್ಯಾಪ್ತಿ | ರೂ.2000–00" |

**5. ನಿಯಮ 5ಎ ಯ ತಿದ್ದುಪಡಿ.–** ಸದರಿ ನಿಯಮಗಳ, 5ಎ ನಿಯಮದ, ಉಪನಿಯಮ (1) ರಲ್ಲಿ "ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

**6. ನಿಯಮ 5ಬಿ ಯ ತಿದ್ದುಪಡಿ.–** ಸದರಿ ನಿಯಮಗಳ, 5ಬಿ ನಿಯಮದಲ್ಲಿ, ಉಪನಿಯಮ (8)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು,– ಎಂದರೆ,–

"(9) ಸಹಕಾರಿಯ ಆಡಳಿತ ಮಂಡಳಿ ಚುನಾವಣೆಯು ಬೆಳಿಗ್ಗೆ 9–00 ಘಂಟೆಯಿಂದ ಸಂಜೆ 4–00 ಘಂಟೆಯ ಅವಧಿಯೊಳಗೆ ಜರುಗಿಸತಕ್ಕದ್ದು."

**7. ನಿಯಮ 5ಸಿ ಯ ತಿದ್ದುಪಡಿ.–** ಸದರಿ ನಿಯಮಗಳ, 5ಸಿ ನಿಯಮದಲ್ಲಿ,–

(ಎ) ಉಪನಿಯಮ (1)ರ ಬದಲಾಗಿ ಈ ಕೆಳಗಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ,–

"(1) ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕ ಚುನಾವಣೆ ಅಥವಾ ಪ್ರತಿನಿಧಿ ಚುನಾವಣೆ ಅಥವಾ ಪದಾಧಿಕಾರಿಗಳ ಚುನಾವಣೆ ಅಥವಾ ನಿರ್ದೇಶಕರ / ಪದಾಧಿಕಾರಿಗಳ ಖಾಲಿ ಬಿದ್ದ ರಿಕ್ತ ಸ್ಥಾನಗಳಿಗೆ ಮಾಧ್ಯಮಿಕ, ಫೆಡರಲ್ ಮತ್ತು ಶೃಂಗ ಸಹಕಾರಿಗಳಿಗೆ ಚುನಾವಣಾ ಪ್ರಾಧಿಕಾರವು ಮತ್ತು ಪ್ರಾಥಮಿಕ ಸಹಕಾರಿಗಳಿಗೆ ಚುನಾವಣಾಧಿಕಾರಿಯು ರಿಟರ್ನಿಂಗ್ / ಸಹಾಯಕ ರಿಟರ್ನಿಂಗ್ ಅಧಿಕಾರಿಗಳನ್ನು ನೇಮಿಸತಕ್ಕದ್ದು.

ಪರಂತು, ಸಹಕಾರ ಇಲಾಖೆಯ ಸಂಬಂಧಿಸಿದ ಕಾರ್ಯವ್ಯಾಪ್ತಿಯ ಸಹಾಯಕ ನಿಬಂಧಕರು / ಉಪನಿಬಂಧಕರು ಅಥವಾ ಜಂಟಿ ನಿಬಂಧಕರನ್ನು ರಿಟರ್ನಿಂಗ್ ಅಧಿಕಾರಿಯನ್ನಾಗಿ ನೇಮಿಸತಕ್ಕದ್ದಲ್ಲ."

(ಬಿ) ಉಪನಿಯಮ (2) ರಲ್ಲಿ,–

(1) ಖಂಡ (i) ನಲ್ಲಿ "ಸಹಕಾರ ಚುನಾವಣಾ ಆಯೋಗದ ಅನುಮೋದನೆಗೆ ಒಳಪಟ್ಟು" ಎಂಬ ಪದಗಳಿಗೆ ಬದಲಾಗಿ "ಚುನಾವಣಾಧಿಕಾರಿಯ ಮೇಲುಸ್ತುವಾರಿಯಲ್ಲಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

(2) ಖಂಡ (ii) ನಲ್ಲಿ "ಸಹಕಾರ ಚುನಾವಣಾ ಆಯೋಗವು ನಿರ್ದೇಶಿಸುವಂತಹ ರೀತಿಯಲ್ಲಿ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(3) ಖಂಡ (iii) ರ (ಎಫ್) ರಲ್ಲಿ "ಕಳುಹಿಸಲು ವ್ಯವಸ್ಥೆ ಮಾಡುವುದು" ಎಂಬ ಪದಗಳ ಬದಲಾಗಿ "ನೇಮಕ ಮಾಡಿಕೊಳ್ಳುವುದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಸಿ) ಉಪನಿಯಮ (3)ರಲ್ಲಿ, ಖಂಡ (1)(ಎ) ರಲ್ಲಿ "ಸಾಮಾನ್ಯ ಅಂಚೆ" ಎಂಬ ಪದಗಳ ತರುವಾಯ "ಅಥವಾ ಸ್ವೀಕೃತಿಯೊಂದಿಗೆ ಬಹುಪ್ರಮಾಣದ ಅಂಚೆ (Bulk post)" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಡಿ) ಉಪನಿಯಮ (7) ರಲ್ಲಿ "ಚುನಾವಣಾ ಆಯೋಗದ ಅನುಮತಿಗೊಳಪಟ್ಟು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(ಇ) ಉಪನಿಯಮ (11) ನ್ನು ಬಿಟ್ಟುಬಿಡತಕ್ಕದ್ದು.

**8. ನಿಯಮ 5ಇ ಯ ತಿದ್ದುಪಡಿ.–** ಸದರಿ ನಿಯಮಗಳ, 5ಇ ನಿಯಮದಲ್ಲಿ ಉಪನಿಯಮ (3)(ಎ) ರಲ್ಲಿ, "ಸಹಕಾರಿಯ ಕಚೇರಿಯ ಸೂಚನಾಫಲಕದಲ್ಲಿ" ಎಂಬ ಪದಗಳ ನಂತರ "ಪ್ರಕಟಿಸತಕ್ಕದ್ದು" ಎಂಬ ಪದಗಳನ್ನು ಸೇರಿಸತಕ್ಕದ್ದು.

**9. ನಿಯಮ 5ಎಫ್ ದ ತಿದ್ದುಪಡಿ.–** ಸದರಿ ನಿಯಮಗಳ, 5ಎಫ್ ನಿಯಮದಲ್ಲಿ, ಉಪನಿಯಮ(1) ರಲ್ಲಿ "ಖುದ್ದಾಗಿ ರಿಟರ್ನಿಂಗ್ ಅಧಿಕಾರಿಗೆ" ಎಂಬ ಪದಗಳ ತರುವಾಯ "ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

**10. ನಿಯಮ 5ಜಿ ದ ತಿದ್ದುಪಡಿ.–** ಸದರಿ ನಿಯಮಗಳ, 5ಜಿ ನಿಯಮದಲ್ಲಿ, ಉಪನಿಯಮ (1)ರಲ್ಲಿ "ಎಲ್ಲಾ ಯುಕ್ತ ಸೌಲಭ್ಯಗಳನ್ನು ಕೊಡತಕ್ಕದ್ದು" ಎಂಬ ಪದಗಳ ಬದಲಾಗಿ "ಅವಶ್ಯ ಮಾಹಿತಿಯನ್ನು ನೀಡತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**11. ನಿಯಮ 5ಎಲ್ ದ ತಿದ್ದುಪಡಿ.–** ಸದರಿ ನಿಯಮಗಳ, 5ಎಲ್ ನಿಯಮದಲ್ಲಿ, ಉಪನಿಯಮ (3)ರಲ್ಲಿ "ಮತ್ತು ಜಿಲ್ಲಾ ಚುನಾವಣಾಧಿಕಾರಿಯು ಸಹಕಾರ ಚುನಾವಣಾ ಆಯೋಗದ ಅನುಮೋದನೆಯೊಡನೆ ಉಳಿದ ಸ್ಥಾನ ಅಥವಾ ಸ್ಥಾನಗಳಿಗೆ ಅರ್ಹ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಚುನಾಯಿಸಲು ಸೂಕ್ತ ಪ್ರಕ್ರಿಯೆಯನ್ನು ತೆಗೆದುಕೊಳ್ಳಲು ಆ ಸಹಕಾರಿಯನ್ನು ಕೋರತಕ್ಕದ್ದು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

**12. ನಿಯಮ 5ಎಜಿ ದ ತಿದ್ದುಪಡಿ.–** ಸದರಿ ನಿಯಮಗಳ, 5ಎಜಿ ನಿಯಮದಲ್ಲಿ, ಉಪನಿಯಮ (1)ರಲ್ಲಿ "ಸಹಕಾರ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

**13. ನಿಯಮ 5ಎಐ ದ ತಿದ್ದುಪಡಿ.–** ಸದರಿ ನಿಯಮಗಳ, 5ಎಐ ನಿಯಮದಲ್ಲಿ, ಉಪನಿಯಮ (1)ರಲ್ಲಿ,–

(ಎ) ಖಂಡ (ಬಿ) ರಲ್ಲಿನ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

(ಬಿ) ಖಂಡ (ಸಿ) ಅನ್ನು ಬಿಟ್ಟುಬಿಡತಕ್ಕದ್ದು.

**14. ನಿಯಮ 5ಎಕೆ ಯಲ್ಲಿ.–** ಸದರಿ ನಿಯಮಗಳ, 5ಎಕೆ ನಿಯಮದಲ್ಲಿ, "ಮತ್ತು ಉಳಿದ ಎಲ್ಲಾ ಸಂದರ್ಭಗಳಲ್ಲಿ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

**15. ನಿಯಮ 6 ರ ತಿದ್ದುಪಡಿ.–** ಸದರಿ ನಿಯಮಗಳ, 6ನೇ ನಿಯಮದಲ್ಲಿ,–

(ಎ) ಉಪನಿಯಮ (3) ರಲ್ಲಿ "ಅಂಚೆಯ ಮೂಲಕ" ಎಂಬ ಪದಗಳ ತರುವಾಯ "ಅಥವಾ ಖುದ್ದಾಗಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) ಉಪನಿಯಮ (19) ರಲ್ಲಿ "ದಾಖಲಿಸಿ ಒಂದು ಸಮಗ್ರ ವರದಿಯನ್ನು ತಯಾರಿಸತಕ್ಕದ್ದು" ಎಂಬ ಪದಗಳ ಬದಲಾಗಿ "ದಾಖಲಿಸುವುದು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

**16. ನಿಯಮ 6ಸಿ ಯ ತಿದ್ದುಪಡಿ.–** ಸದರಿ ನಿಯಮಗಳ, 6ಸಿ ನಿಯಮದಲ್ಲಿ, ಉಪನಿಯಮ(2)ರ ಖಂಡ (i)ರ ಉಪಖಂಡ (ಎ) ರಲ್ಲಿ "ಸಾಮಾನ್ಯ ಅಂಚೆ; ಅಥವಾ" ಎಂಬ ಪದಗಳ ತರುವಾಯ "ಸ್ವೀಕೃತಿಯೊಂದಿಗೆ ಬಹುಪ್ರಮಾಣದ ಅಂಚೆ (Bulk post)" ಎಂಬ ಪದವನ್ನು ಸೇರಿಸತಕ್ಕದ್ದು.

**17. ನಿಯಮ 6ಐ ದ ತಿದ್ದುಪಡಿ.–** ಸದರಿ ನಿಯಮಗಳ, 6ಐ ನಿಯಮದಲ್ಲಿ, "ಚುನಾವಣಾ ಆಯೋಗವು" ಎಂಬ ಪದಗಳಿಗೆ ಬದಲಾಗಿ "ಸರ್ಕಾರ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

**18. ನಿಯಮ 6ಐ(ಎ) ಯ ಹೊಸ ಸೇರ್ಪಡೆ.–** ನಿಯಮ 6ಐ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ,–

"**6ಐ(ಎ). ಹಿಂದುಳಿದ ವರ್ಗಗಳ ಮೀಸಲಾತಿ ಸ್ಥಾನಗಳ ಸರದಿ–** ಈ ನಿಯಮದಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲಾಗಿರುವ ಎರಡು ಸ್ಥಾನಗಳನ್ನು ಕೆಳಕಂಡ ರೀತಿ ತುಂಬತಕ್ಕದ್ದು, ಎಂದರೆ.–

(1) ಪ್ರಥಮ ಅವಧಿಗೆ, ಎರಡು ಸ್ಥಾನಗಳನ್ನು ಪ್ರವರ್ಗ–ಎ ಅಭ್ಯರ್ಥಿಗಳಿಂದ; ಮತ್ತು

(2) ದ್ವಿತೀಯ ಮತ್ತು ತೃತೀಯ ಅವಧಿಗೆ, ಎರಡು ಸ್ಥಾನಗಳನ್ನು ಪ್ರವರ್ಗ–ಎ ಮತ್ತು ಪ್ರವರ್ಗ–ಬಿ ಅಭ್ಯರ್ಥಿಗಳಿಂದ; ಮತ್ತು

(3) ನಾಲ್ಕನೇ ಅವಧಿಗೆ, ಎರಡು ಸ್ಥಾನಗಳನ್ನು ಪ್ರವರ್ಗ–ಎ ಅಭ್ಯರ್ಥಿಗಳಿಂದ

– ಮತ್ತು ಈ ಪ್ರಕ್ರಿಯೆಯು ಅನುಕ್ರಮವಾಗಿ ಮುಂದುವರಿಯತಕ್ಕದ್ದು.

ಪರಂತು, ಈ ವಿಷಯದಲ್ಲಿ ಅವಶ್ಯವೆನಿಸಿದಲ್ಲಿ ರಿಜಿಸ್ಟ್ರಾರನು ಸ್ಪಷ್ಟೀಕರಣ, ನಿರ್ದೇಶನ, ಸಲಹೆ ಸೂಚನೆಗಳನ್ನು ನೀಡುವ ಅಧಿಕಾರವನ್ನು ಹೊಂದಿರತಕ್ಕದ್ದು.

**ವಿವರಣೆ:–** ಹಿಂದುಳಿದ ವರ್ಗಗಳ ಎ ಮತ್ತು ಬಿ ಪ್ರವರ್ಗಗಳೆಂದರೆ ಕರ್ನಾಟಕದ ರಾಜ್ಯ ಪಂಚಾಯತ್ ರಾಜ್ ಅಧಿನಿಯಮದಲ್ಲಿ ವಿವರಣೆ ನೀಡಿದಂತೆ ಇರತಕ್ಕದ್ದು."

**19. ನಿಯಮ 6ಎಲ್ ನ ಸೇರ್ಪಡೆ:–** ನಿಯಮ 6ಕೆ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ,–

"**6ಎಲ್. ಸಹಕಾರಿಯ ಅಧಿಕಾರಿಗಳ ಮತ್ತು ನೌಕರರ ನೇರ ನೇಮಕಾತಿ:–**

(1) ಸಹಕಾರಿಗಳ ಅಧಿಕಾರಿಗಳು ಮತ್ತು ನೌಕರರು ನೇರ ನೇಮಕಾತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಸದಸ್ಯರನ್ನೊಳಗೊಂಡ ನೇಮಕಾತಿ ಸಮಿತಿಯನ್ನು ರಚಿಸತಕ್ಕದ್ದು.

| | | |
|---|---|---|
| 1) | ಸಹಕಾರಿಯ ಅಧ್ಯಕ್ಷರು | –ಅಧ್ಯಕ್ಷರು |
| 2) | ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಆಯ್ಕೆ ಮಾಡಿಕೊಂಡ ಒಬ್ಬ ಸದಸ್ಯರು | –ಸದಸ್ಯರು |
| 3) | ಸಂಯುಕ್ತ ಸಹಕಾರಿಯ ಒಬ್ಬ ಪ್ರತಿನಿಧಿ | –ಸದಸ್ಯರು |
| 4) | ಸಹಕಾರಿಯಿಂದ ನಾಮಕರಣಗೊಂಡ ಸಹಕಾರ ಕ್ಷೇತ್ರದಲ್ಲಿ ಅನುಭವ ಹೊಂದಿರುವ ಬಾಹ್ಯ ತಜ್ಞರು | –ಸದಸ್ಯರು |
| 5) | ಸಹಕಾರಿಯ ಮುಖ್ಯಕಾರ್ಯನಿರ್ವಾಹಕ | –ಸದಸ್ಯ ಕಾರ್ಯದರ್ಶಿ |

(2) ಸಮಿತಿಯ ಸಭೆಗೆ ಅವಶ್ಯ ಕೋರಂ ಕನಿಷ್ಠ ಮೂರು ಇರತಕ್ಕದ್ದು.

**20. ನಿಯಮ 8ಬಿ ಯ ತಿದ್ದುಪಡಿ.–** ಸದರಿ ನಿಯಮಗಳ, 8ಬಿ ನಿಯಮದಲ್ಲಿ,–

(ಎ) ಉಪನಿಯಮ (1) ರಲ್ಲಿ "ಚಾರ್ಟರ್ಡ್ ಅಕೌಂಟೆಂಟ್ / ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆ" ಎಂಬ ಪದಗಳ ತರುವಾಯ "ಮತ್ತು ಕಾಸ್ಟ್ ಅಕೌಂಟೆಂಟ್ಸ್ ಮತ್ತು ಕಾಸ್ಟ್ ಅಕೌಂಟೆಂಟ್ ಫರ್ಮ್ಸ್" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) ಉಪನಿಯಮ (4) ರ ಕೋಷ್ಟಕದ ಕ್ರಮ ಸಂಖ್ಯೆ 1 ರಲ್ಲಿ "ಲೆಕ್ಕಪರಿಶೋಧಕರ ಫರ್ಮ್‌ಗಳು" ಎಂಬ ಪದಗಳ ತರುವಾಯ "ಲೆಕ್ಕಪರಿಶೋಧನಾ ಉಪನಿರ್ದೇಶಕರ ಹುದ್ದೆಗಿಂತ ಕಡಿಮೆ ಇಲ್ಲದ ಲೆಕ್ಕಪರಿಶೋಧನ ಇಲಾಖೆಯ ಅಧಿಕಾರಿಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎಂ. ವೆಂಕಟಸ್ವಾಮಿ**
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಸಹಕಾರ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ8) (500 ಪ್ರತಿಗಳು)



# ಸಹಕಾರಿ ಕ್ಷೇತ್ರದಲ್ಲಿ ವ್ಯವಹಾರ ವೃದ್ಧಿಯ ಮಹತ್ವ

ಡಾ॥ ನಂದೀಶ ವಿ. ಹಿರೇಮಠ, ಪ್ರೊಫೆಸರ್ ಸಹಕಾರಿ ತರಬೇತುದಾರರು, ಕನಸಲ್ಟಂಟ್ ಮತ್ತು ಆಡಳಿತ ಸಲಹೆಗಾರರು, ಬೆಂಗಳೂರು.

**ಸಹಕಾರಿ ಸಂಸ್ಥೆಗಳು ಹಲವಾರು ರೀತಿಯಲ್ಲಿ ವಿಶಿಷ್ಟವಾಗಿರುವದು ನಮಗೆಲ್ಲ ತಿಳಿದಿದೆ. ಸಹಕಾರಿಗಳಲ್ಲಿ ಸದ್ಯಸರು ಸದ್ಯಸರಿಗಾಗಿ ಮತ್ತು ಸದ್ಯಸರಿಗೆ ಉಪಯೋಗವಾದ ಸೇವೆ – ಸೌಲಭ್ಯಗಳನ್ನು ನೀಡುವಲ್ಲಿ ಸಾಕಷ್ಟು ರೀತಿಯಲ್ಲಿ ಸಫಲತೆ ಹೊಂದಿವೆ. ಅದೇ ರೀತಿಯಲ್ಲಿ ವ್ಯವಹಾರ ಅಭಿವೃದ್ಧಿ (Business Development) ವಿಷಯದಲ್ಲಿ ಸಹಕಾರಿಗಳು ವಶೇಷ ಗಮನ ನೀಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಗಮನವಿಡಬೇಕಾದ ಮತ್ತು ಮಹತ್ವಕಾರಿ ವಿಷಯಗಳನ್ನು ನಾವು ತಿಳಿದುಕೊಳ್ಳೋಣ.**

1. **ಸಹಕಾರಿ ಕ್ಷೇತ್ರದ ತತ್ವ ಮತ್ತು ಇತಿಹಾಸ :** ವ್ಯವಹಾರ ಅಭಿವೃದ್ಧಿಯ ಯೋಜನೆ ನಿರೂಪಣೆ ಮಾಡುವ ಮೊದಲು ಸಹಕಾರಿ ಕ್ಷೇತ್ರದ ತತ್ವಗಳನ್ನು ಮತ್ತು ಇತಿಹಾಸ ತಿಳಿದುಕೊಂಡು, ಸಹಕಾರಿ ಕೆಲಸ ಮಾಡುತ್ತಿರುವ ವ್ಯಾಪ್ತಿಯ ಸಾಮಾಜಿಕ ಆರ್ಥಿಕ ಪರಿಸ್ಥಿತಿಯ ಸ್ಥೂಲ ತಿಳವಳಿಕೆಯನ್ನು ಅರಿತುಕೊಳ್ಳಬೇಕು.
2. **ವ್ಯವಹಾರ ಅಭಿವೃದ್ಧಿಯ ಮಾಡೆಲ್ :** ಸ್ಥಳಿಯ ಪರಿಸ್ಥಿತಿಗೆ ತಕ್ಕಂತೆ ಬೆಳವಣಿಗೆಗೆ ಸಾಧ್ಯತೆ ಇರುವ ಅಂಶಗಳನ್ನು ಮತ್ತು ಸದಸ್ಯರ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ತಮ್ಮದೇ ಆದ ವ್ಯವಹಾರ ಅಭಿವೃದ್ಧಿಯ ಮಾಡೆಲ್‌ಗಳನ್ನು ತಯಾರಿಸಿಕೊಳ್ಳಬೇಕು.
3. **ವ್ಯವಹಾರ ವೃದ್ಧಿಯ ಮಾಡೆಲ್‌ನ ವಿಶ್ಲೇಷಣೆ :** ತಮ್ಮ ಸ್ಥಳಿಯ ಅವಶ್ಯಕತೆಗಳನ್ನು ಹಾಗೂ ಸದಸ್ಯರಿಗೆ ಸೇವೆ ನೀಡುವಲ್ಲಿ ಈ ಹೊಸ ವ್ಯವಹಾರ ವೃದ್ಧಿಯ ಮಾಡೆಲ್ ಸೂಕ್ತವಾಗಬಹುದೇ ಎಂದು ಚಿಕ್ಕ ಪ್ರಯೋಗ (pilot project) ಮಾಡಿ ತಿಳಿದುಕೊಳ್ಳಬೇಕು.
4. **ವ್ಯವಹಾರ ಅಭಿವೃದ್ಧಿ ಯೋಜನೆ (Business Development Plans BDP,) :** ಚಿಕ್ಕ ಪ್ರಯೋಗದ ವಿಶ್ಲೇಷಣೆ ಮಾಡಿ ಬೇಕಾದ ಮಾರ್ಪಾಟುಗಳನ್ನು ಅಳವಡಿಸಿಕೊಂಡು, ಸಂಸ್ಥೆಯು ಸಮಗ್ರವಾಗಿ ಬೆಳೆಯಲು ಬೇಕಾದ "ವ್ಯವಹಾರ ವೃದ್ಧಿಯ ಯೋಜನೆ" ತಯಾರಿಸಕೊಳ್ಳಬೇಕು. ಅದರಲ್ಲಿ ಮುಖ್ಯವಾದ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

- ವ್ಯವಹಾರಕ್ಕೆ ಬೇಕಾದ "ಹಣಕಾಸಿನ ವ್ಯವಸ್ಥೆ" (ಹಣಕಾಸಿನ ಮೂಲಗಳು ಮತ್ತು ಉಪಯೋಗಿಸುವ ಪದ್ದತಿಗಳು)
- ಹಣಕಾಸಿನ ಉಪಯೋಗದಲ್ಲಿ ಯಾವ ರೀತಿಯಲ್ಲಿ ಸಾಲಗಳನ್ನು ಮತ್ತು ಹಣಕಾಸೇತರ ವ್ಯವಹಾರಗಳನ್ನು ನೀಡಲಾಗುತ್ತದೆ ಎಂಬ ಬಗ್ಗೆ ಸಂಪೂರ್ಣ ಯೋಜನೆ ತಯಾರಿಸಕೊಳ್ಳಬೇಕು.
- ಹಣಕಾಸಿನ ಕ್ರೋಡಿಕರಣ ಮಾಡುವಾಗಿ ಡೆಪಾಸಿಟಗಳನ್ನು ತೆಗೆದುಕೊಳ್ಳುವ ಮೊದಲು ಅದನ್ನು ಯಾವರೀತಿ ಉಪಯೋಗಿಸಬಹುದು ಎಂಬ ಬಗ್ಗೆ ಸಮಗ್ರ ಮಾಹಿತಿ ಜೊತೆ ಸಾಲ ನೀಡುವ ಸದಸ್ಯರ ವಿವರ ಮತ್ತು ಯೋಜನೆಗಳು ಸಿದ್ದವಾಗಿದರೆ ಲಾಭಗಳಿಸುವದು ಸರಳವಾಗುತ್ತದೆ.
- ಸಾಲಗಳನ್ನು ನೀಡುವಾಗ ಸಂಸ್ಥೆಯ shoot term, medium-term ಮತ್ತು long-term credit ಸೂಕ್ತವಾದ ಮಿಶ್ರಣದ ಬಗ್ಗೆ ಯೋಜನೆಮಾಡಿಕೊಳ್ಳಬೇಕು.
- ಸಂಸ್ಥೆಯಲ್ಲಿರುವ ಹಣಕಾಸಿನಲ್ಲಿ ಸಾಲಗಳ್ಳನ್ನು ನೀಡಿದ ನಂತರ, ಉಳಿದ ಹೆಚ್ಚಿನ ಹಣಕಾಸಿನ ಮೂಲಗಳನ್ನು ಸೂಕ್ತವಾದ financial instruments ಗಳಲ್ಲಿ ಹಣಹೂಡಿಕೆ investment ಮಾಡುವಲ್ಲಿ ವಿಳಂಬ ಮಾಡಬಾರದು.
- ಇವಲ್ಲದರ ಜೊತೆಗೆ ಸಂಸ್ಥೆಯ ಹಣಕಾಸು ನಿರ್ವಹಣೆಯನ್ನು ನಿರಂತರವಾಗಿ ವಿಶ್ಲೇಷಣೆ ಮಾಡುತ್ತ, ಬೇಕಾದ ಮಾರ್ಪಾಡುಗಳನ್ನು ಮಾಡುವದು ಬಹುಮುಖ್ಯವಾದ ಅಂಶ.
- ಅದೇ ರೀತಿ ಸದಸ್ಯರ ಜೊತೆ ನಿರಂತರ ಸಂಪರ್ಕ ಇಟ್ಟುಕೊಂಡು ಯಾವರೀತಿ ಹೆಚ್ಚಿನ ಸೇವೆ–ಸೌಲಭ್ಯಗಳ್ಳನ್ನು ನೀಡುವ ಬಗ್ಗೆ ಸಲಹೆ–ಸೂಚನೆಗಳನ್ನು ಪಡೆಯುತ್ತಿರಬೇಕು.
- ಸಾಲಗಳ ನಿರ್ವಹಣೆಯಲ್ಲಿಯ Prudential Norms ಗಳನ್ನು ಸಂಪೂರ್ಣವಾಗಿ ಅರಿತು ಸೂಕ್ತವಾಗಿ ಅಳವಡಿಸಿಕೊಂಡರೆ ಸಂಸ್ಥೆಯ "ಹಣಕಾಸಿನ ಆರೋಗ್ಯ (financial health)" ಭದ್ರವಾಗಿರುತ್ತದೆ.
- Cooperative Governance ತತ್ವಗಳನ್ನು ಮುಂದಿನ ಹಂತದಲ್ಲಿ ಅಳವಡಿಸಿಕೊಳ್ಳಲು ಸರಳವಾಗುತ್ತದೆ.
- ಇವೆಲ್ಲ ಬೆಳವಣಿಗೆಯಲ್ಲಿ Information Technology (ತಂತ್ರಜ್ಞಾನ) ಸೂಕ್ತವಾಗಿ ಅಳವಡಿಸಿ–ಕೊಂಡರೆ, ವ್ಯವಹಾರ ಅಭಿವೃದ್ಧಿಯನ್ನು ಇನ್ನು ಹೆಚ್ಚಿನ ಮಟ್ಟಕ್ಕೆ ತೆಗೆದುಕೊಂಡು ಹೋಗಲು ಸಹಕಾರಿಯಾಗುತ್ತದೆ.

5. **ವೃತಿಪರ ಆಡಳಿತ (professional management) :** ಮೇಲೆ ತಿಳಿದುಕೊಂಡ ಎಲ್ಲ ವಿಷಯಗಳ್ಳನ್ನು ಅಳವಡಿಸಿಕೊಳ್ಳುವಾಗ ವೃತಿಪರ ಆಡಳಿತದ ಬಿಗಿತವನ್ನು ಹೆಚ್ಚಿಸಬೇಕು, ಈ ನಿಟ್ಟಿನಲ್ಲಿ ಮುಖ್ಯ ಅಂಶಗಳೆಂದರೆ.

- ಸಂಸ್ಥೆಯಲ್ಲಿ ನಿರುಪಯುಕ್ತ ಸದಸ್ಯರನ್ನು ತೆಗೆದು ಹಾಕಬೇಕು ಅಥವಾ ಸಕ್ರೀಯವಾಗಿ ಭಾಗವಹಿಸಲು ಪ್ರೇರಪಿಸಬೇಕು.
- ಅದೇ ರೀತಿ ಸಹಕಾರಿಯಲ್ಲಿ ಕೆಲಸಮಾಡದ ನಾಯಕರು (Cooperative Leaders) ತಮ್ಮ ಜವಾಬ್ದಾರಿಗೆ ಅನುಗುಣವಾಗಿ ಕೆಲಸ ಮಾಡುವಂತೆ ತರಬೇತಿ ನೀಡಿ–ಬದ್ಧರನ್ನಾಗಿ ಮಾಡಬೇಕು.
- ಸದಸ್ಯರ ಸಭೆಗಳನ್ನ 3 ತಿಂಗಳಲ್ಲಿ ಒಂದು ಸಾರಿ ಆಯೋಜಿಸಿ ಸಲಹೆಗಳನ್ನು ಸೂಕ್ತವಾಗಿ ಅಳವಡಿಸಿಕೊಳ್ಳಬೇಕು.
- ವಿನೂತನ ರೀತಿಯ ಸೇವೆ –ಸೌಲಭ್ಯಗಳನ್ನು ಸಂಸೇಯಿಂದ ಸದಸ್ಯರಿಗೆ ಅನುಕೂಲವಾಗುವಂತೆ ಯೋಜನೆ ಮುಲಕ ಅಳವಡಿಸಬೇಕು.
- ಸಿಬ್ಬಂದಿಗೆ ಸದಸ್ಯರಿಗೆ ಮತ್ತು ಆಡಳಿತ ನಿರ್ವಹಣೆಯ ನಾಯಕರಿಗೆ ಸತತವಾದ ಮತ್ತು ಸೂಕ್ತ ತರಬೇತಿಗಳನ್ನು ಆಯೋಜಿಸಬೇಕು.

Straligie management and corporate governanceನ ತತ್ವಗಳನ್ನು ಸಂಸ್ಥೆ ಬೆಳವಣಿಗೆ ಹೊಂದಿದಂತೆ ಕ್ರಮೇಣವಾಗಿ ಅಳವಡಿಸಿಕೊಂಡಲ್ಲಿ ಸಫಲವಾದ–ಸದೃಡಕಾರಿ ಸಹಕಾರಿಗಳನ್ನು ನಾವು ನಿರ್ಮಾಣಮಾಡಿ ಯಶಸ್ಸುಕಾಣಬಹುದು. ■

## ಪ್ರತಿಷ್ಠಿತ ಸೌಹಾರ್ದ ಸಹಕಾರಿ ಬ್ಯಾಂಕುಗಳಲ್ಲಿ ಉದ್ಯೋಗಾವಕಾಶ

- ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ
- ವಿಕಾಸ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕ್ ನಿ., ಹೊಸಪೇಟೆ
- ಚನ್ನಬಸವಸ್ವಾಮಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಗಂಗಾವತಿ

ಇವುಗಳಲ್ಲಿ ಸಿ. ಇ. ಒ., ಹಿರಿಯ ವ್ಯವಸ್ಥಾಪಕ, ವ್ಯವಸ್ಥಾಪಕ ಇತ್ಯಾದಿ ಹುದ್ದೆಗಳಿಗಾಗಿ ಅರ್ಹ ಅನುಭವಿ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

### ಅರ್ಹತೆ

**ಸಿ.ಇ.ಒ. :** ಅಭ್ಯರ್ಥಿಗಳು ಬ್ಯಾಂಕಿಂಗ್, ವಾಣಿಜ್ಯ, ಹಣಕಾಸು, ಇತ್ಯಾದಿ ವಿಷಯಗಳನ್ನು ಪ್ರಮುಖವಾಗಿಸಿದ ಪದವಿಯನ್ನು ಪಡೆದಿರಬೇಕು. ಕಂಪ್ಯೂಟರ ಬಳಕೆಯ ಜೊತೆಯಲ್ಲಿ ಬ್ಯಾಂಕಿಂಗ್ ಕ್ಷೇತ್ರದ ಅಧುನಿಕ ತಂತ್ರಜ್ಞಾನ ಬಳಕೆಯಲ್ಲಿ ಪರಿಣಿತಿ ಹೊಂದಿರಬೇಕು. ಆರ್.ಬಿ.ಐ., ಸಹಕಾರ ಇಲಾಖೆ ಸೇರಿದಂತೆ ಇತರ ಇಲಾಖೆಗಳ ಜೊತೆಯಲ್ಲಿನ ವ್ಯಾವಹಾರಿಕ ಸಂಪರ್ಕದ ಜ್ಞಾನ ಹೊಂದಿರಬೇಕು. ಕನ್ನಡ ಹಾಗೂ ಇಂಗ್ಲೀಷ ಭಾಷೆಯಲ್ಲಿ ಸುಲಲಿತವಾದ ಸಂವಹನದ ಮಾಡುವ ಕಲೆ ಅಪೇಕ್ಷಣೀಯ.




**ಹಿರಿಯ ವ್ಯವಸ್ಥಾಪಕ/ವ್ಯವಸ್ಥಾಪಕ :** ಬ್ಯಾಂಕಿಂಗ್, ವಾಣಿಜ್ಯ, ಹಣಕಾಸು, ಮಾನವ ಸಂಪನ್ಮೂಲ ಇತ್ಯಾದಿ ವಿಷಯಗಳಲ್ಲಿ ಪದವಿಯ ಜೊತೆಯಲ್ಲಿ ಕಂಪ್ಯೂಟರ ಬಳಕೆಯಲ್ಲಿ ಪರಿಣಿತಿ ಹೊಂದಿರಬೇಕು.

ಬ್ಯಾಂಕುಗಳ ಯಾವುದೇ ಶಾಖೆಯಲ್ಲಿ ಕೆಲಸ ಮಾಡಲು ಸಿದ್ಧರಿರಬೇಕು. ಅನುಭವಿಗಳಿಗೆ ಆದ್ಯತೆಯಾಗಿದ್ದರೂ ಕೂಡ ಉತ್ಸಾಹಿ ಹೊಸಬರಿಗೂ ಕೂಡ ಅವಕಾಶ ಇದೆ. ಅರ್ಹತೆಗೆ ತಕ್ಕಂತೆ ಆಕರ್ಷಕ ಸಂಬಳ ಹಾಗೂ ಸೌಲಭ್ಯಗಳಿವೆ.

ತಮ್ಮ ಬಗ್ಗೆ ಹೇಳಿಕೊಳ್ಳಬಹುದಾದ ಎಲ್ಲ ಸ್ವ ವಿವರಗಳನ್ನು ಕನ್ನಡ/ಇಂಗ್ಲೀಷ ಭಾಷೆಯಲ್ಲಿ ಕೈಬರಹದಲ್ಲಿ ಬರೆದು, ತಮ್ಮ ವಿದ್ಯಾರ್ಹತೆ, ಅನುಭವ ಇತ್ಯಾದಿಗಳ ದಾಖಲಾತಿಗಳ ನಕಲು ಪ್ರತಿಯ ಜೊತೆಯಲ್ಲಿ, ತಮ್ಮ ಯಾವುದಾದರು ಒಂದು ಅಧೀಕೃತ ಗುರುತಿನ ಚೀಟಿಯ ನಕಲು ಪ್ರತಿ ಹಾಗೂ ಪಾಸಪೋರ್ಟ ಅಳತೆಯ ಭಾವಚಿತ್ರವನ್ನು ಒಳಗೊಂಡ ಅರ್ಜಿಯನ್ನು ದಿನಾಂಕ 25 ಜುಲೈ 2015 ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿಕೊಡಬೇಕು.

ಅರ್ಜಿ ಪರಿಶೀಲನೆಯ ನಂತರ ಅರ್ಹ ಅಭ್ಯರ್ಥಿಗಳಿಗೆ ಮೌಖಿಕ ಸಂದರ್ಶನದ ನಂತರ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

**ಅರ್ಜಿಗಳನ್ನು ಕಳುಹಿಸಿಕೊಡಬೇಕಾದ ವಿಳಾಸ :**

**ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ ನಿ.,**
ಸುಕೋ ಭವನ, ಮೋಕಾ ರಸ್ತೆ' ಗಾಂಧಿನಗರ
ಬಳ್ಳಾರಿ–583 101

**ಚನ್ನಬಸವಸ್ವಾಮಿ ಸೌಹಾರ್ದ ಸಹಕಾರಿ ಬ್ಯಾಂಕ ನಿ.,**
ಸಿಬಿಎಸ್ ಕಾಂಪ್ಲೆಕ್ಸ್, 1ನೇ ಮಹಡಿ'ಬಸ್‌ಸ್ಟ್ಯಾಂಡ್ ರಸ್ತೆ
ಗಂಗಾವತಿ 'ಕೊಪ್ಪಳ–583227

**ವಿಕಾಸ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕ್ ನಿ.,**
ಅಂಚೆ ಪೆಟ್ಟಿಗೆ ಸಂಖ್ಯೆ 44, ಸ್ಟೇಷನ್ ರಸ್ತೆ, ಹೊಸಪೇಟೆ. ಬಳ್ಳಾರಿ ಜಿಲ್ಲೆ.

## ಸುಕೋ ಬ್ಯಾಂಕ್ ವಾರ್ತೆ

ರಾಜ್ಯದ ಸೌಹಾರ್ದ ಕ್ಷೇತ್ರದ ಪ್ರತಿಷ್ಠಿತ ಸುಕೋ ಬ್ಯಾಂಕಿಗೆ ಆರ್.ಬಿ.ಐ. ನವರಿಂದ ಮೊಬೈಲ್ ಬ್ಯಾಂಕಿಂಗ್ ಸೌಲಭ್ಯದ ಪರವಾನಿಗೆ ದೊರೆತಿದೆ. ಕಳೆದ ಎರಡು ವರ್ಷಗಳ ಹಿಂದೆ ಸಹಕಾರ ಕ್ಷೇತ್ರದ ಬ್ಯಾಂಕುಗಳಲ್ಲಿ ಪ್ರಪ್ರಥಮವಾಗಿ ಡೆಬಿಟ್ ಕಾರ್ಡ ಸೌಲಭ್ಯ ಪಡೆದಿರುವ ಬ್ಯಾಂಕ್ ಹಾಗೂ ಪ್ರಸ್ತುತ ಮೊಬೈಲ್ ಬ್ಯಾಂಕಿಂಗ್ ಸೇವೆಯನ್ನು ಪಡೆದಿರುವ ಪ್ರಥಮ ಸಹಕಾರಿ ಬ್ಯಾಂಕು ಎಂದು ಸುಕೋ ಬ್ಯಾಂಕ್ ಅಧ್ಯಕ್ಷ ಶ್ರೀ ಮನೋಹರ ಮಸ್ಕಿಯವರು ತಿಳಿಸಿದ್ದಾರೆ.

# ಸಹಕಾರಿ ಕ್ಷೇತ್ರದಲ್ಲಿ ವ್ಯವಹಾರ ನಿರ್ವಹಣೆಯ ಪಾತ್ರ

▸▸ ಶ್ರೀ ವಿಜಯ ಬಿ.ಎಸ್. ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಕಲಬುರಗಿ ವಿಭಾಗ.

**ಆಡಂಬರದ ವ್ಯವಹಾರ ದೂರಣೆಯನ್ನು ಬಿಟ್ಟು ಯಾವ ಸಹಕಾರಿಯು ತನ್ನ ಸದಸ್ಯರೂಂದಿಗೆ ಉತ್ತಮ ವ್ಯಹಾರಿಕ ಸಂಬಂದವನ್ನು ಹೂಂದಿರುತ್ತದೆಯೂ ಅದು ಒಂದು ಉತ್ತಮ ಸಹಕಾರಿಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ.**

ಭಾರತ ದೇಶದಂತಹ ಅಭಿವೃದ್ಧಿಹೊಂದುತ್ತಿರುವ ದೇಶಗಳಲ್ಲಿ ಸಹಕಾರಿ ಕ್ಷೇತ್ರವು ಅತಿ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ, ದೇಶದ ಅರ್ಥವ್ಯವಸ್ಥೆಗೆ ಸಹಕಾರಿಗಳು ತನ್ನದೆ ಆದ ಕೊಡುಗೆಯನ್ನು ನೀಡುತ್ತ ಬಂದಿವೆ.

ಇತ್ತಿಚಿನ ದಿನಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರದ ಕ್ಷಿಪ್ರ ಬೆಳವಣಿಗೆ ಯಿಂದಾಗಿ ಸಹಕಾರಿ ಕ್ಷೇತ್ರವು ಪೈಪೋಟಿ ಎದುರಿಸುವಂತಾಗಿದೆ, ಇಂತಹ ಸಂದಿಗ್ದ ಪರಿಸ್ಥಿತಿಯಲ್ಲಿ ಸಹಕಾರಿಗಳು ಸಹ ಬದಲಾವಣೆ ಗೊಳ್ಳಲೇಬೇಕು. ಸಹಕಾರಿಗಳ ಬದಲಾವಣೆಗೆ ಇದು ಉತ್ತಮ ಕಾಲವಾಗಿದೆ, ಸಮಯವು ಯಾರಿಗು ಕಾಯುತ್ತಾ ಕೂರುವುದಿಲ್ಲ ಸಮಯಕ್ಕೆ ತಕ್ಕಂತೆ ಬದಲಾವಣೆ ಮಾಡಿಕೂಂಡು ವ್ಯಹಾರವನ್ನು ನಡೆಸಬೇಕಾಗಿರುವುದು ಅನಿರ್ವಾಯ ಹಾಗೂ ಅಗತ್ಯವು ಆಗಿದೆ.

ಯಾವುದೇ ಸಹಕಾರಿಯ ಬೆಳವಣೆಗೆಯು ಅದು ತನ್ನ ವ್ಯವಹಾರವನ್ನು ಹೇಗೆ ನಿರ್ವಹಿಸುತ್ತಿದೆ ಎನ್ನುವ ಅಂಶದ ಆಧಾರದ ಮೇಲೆ ನಿಂತಿರುತ್ತದೆ. ಉತ್ತಮ ವ್ಯವಹಾರ ನಿರ್ವಹಣೆ ಕೌಶಲ್ಯವನ್ನು ಯಾವ ಸಹಕಾರಿಯು ಅಳವಡಿಸಿಕೂಂಡಿರುತ್ತದೆಯೊ ಅದು ತನ್ನ ಕ್ಷೇತ್ರದಲ್ಲಿ ಹಾಗೂ ಸಮಾಜದಲ್ಲಿ ತನ್ನದೆ ಆದ BRAND IMAGE ಹೂಂದಿರುತ್ತದೆ.

ಆಡಂಬರದ ವ್ಯವಹಾರ ದೂರಣೆಯನ್ನು ಬಿಟ್ಟು ಯಾವ ಸಹಕಾರಿಯು ತನ್ನ ಸದಸ್ಯರೂಂದಿಗೆ ಉತ್ತಮ ವ್ಯಹಾರಿಕ ಸಂಬಂದವನ್ನು ಹೂಂದಿರುತ್ತದೆಯೂ ಅದು ಒಂದು ಉತ್ತಮ ಸಹಕಾರಿಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಸಹಕಾರಿಗಲ್ಲಿ ವ್ಯವಹಾರ ನಿರ್ವಹಣೆಯು ಸವಾಲಿನ ಕೆಲಸವಾಗಿದೆ. ವ್ಯವಹಾರ ನಿರ್ವಹಣೆಯು ಕಲೆ ಹಾಗು ವಿಜ್ಞಾನವು ಹೌದು. ತನ್ನಲ್ಲಿರುವ ಬಂಡವಾಳವನ್ನು ಯಾವೆಲ್ಲಾ ಚಟುವಟಿಕೆಗಳಿಗೆ ಹೂಡಬೇಕು ಎಂಬುದನ್ನು ನಿರ್ಧರಿಸುವುದು ಕಲೆಯಾದರೆ ಆ ಹೂಡಿಕೆ ಚಟುವಟಿಕೆಯನ್ನು ಕ್ರಮಬದ್ದವಾಗಿ ನಿಯಂತ್ರಿಸುವುದು ವಿಜ್ಞಾನವಾಗಿರುತ್ತದೆ.

ಅಮೇರಿಕಾದ ಖ್ಯಾತ ಹೂಡಿಕೆ ತಜ್ಞರಾದ ವಾರನ್ ಬಫೆಟ್ ಹೇಳುವಂತೆ "don't put all eggs in one basket" ಅಂದರೆ ತನ್ನಲ್ಲಿರುವ ಎಲ್ಲಾ ಬಂಡವಾಳವನ್ನು ಕೇವಲ ಒಂದೇ ರೀತಿಯ ವ್ಯವಹಾರಕ್ಕೆ ಹೂಡಿಕೆ ಮಾಡದೆ ವಿವಿಧ ಯೋಜನೆಗಳ ಮೂಲಕ ತನ್ನ ಸದಸ್ಯರನ್ನು ಆಕರ್ಷಿಸಬೇಕು, ಸದಸ್ಯರ ಅಗತ್ಯತೆಗಳಿಗನುಗುಣವಾಗಿ ಇತರ ಚಟುವಟಿಕೆಗಳನ್ನು ಕೈಗೊಳ್ಳುವುದರ ಮೂಲಕ ಸಹಕಾರಿಯ ಬೆಳವಣಿಗೆ ಜೂತೆಗೆ ಆದಾಯವನ್ನು ಗಳಿಸಬಹುದಾಗಿದೆ. ಆದರಿಂದ diversification of business ಬಹಳ ಮುಖ್ಯ.

ಒಂದು ವ್ಯವಹಾರಿಕ ಚಟುವಟಿಕೆಯನ್ನು ಕೈಗೂಳ್ಳಬೇಕಾದರು ಕ್ರಮಬದ್ದವಾದ ವಿಧಾನ ಅತಿ ಮುಖ್ಯವಾಗಿರುತ್ತದೆ. ಮೂದಲು ತನ್ನ ಸದಸ್ಯರ ಅಗತ್ಯತೆಗಳನ್ನು ಗುರಿತಿಸಬೇಕು, ಅಗತ್ಯತೆಗಳನ್ನು ಗುರಿತಿಸಿದ ನಂತರ ಆ ಅಗತ್ಯತೆಗಳನ್ನು ಪೂರೈಸಲು ಅಗತ್ಯವಾದ ಬಂಡವಾಳವಿದೆಯೇ ಎಂಬುದನ್ನು ಕಾತರಿಪಡಿಸಿಕೂಳ್ಳಬೇಕು ನಂತರ ತನ್ನ ಸದಸ್ಯರಿಗೆ ತ್ವರಿತವಾಗಿ ಬೇಕಾಗಿರುವ ಅಗತ್ಯತೆ ಯನ್ನು ಹೇಗೆ ನಿರ್ವಹಿಸಬೇಕು ಎಂಬುದರ ಮೇಲೆ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿಕೂಂಡ ನಂತರವೇ ತನ್ನ ವ್ಯವಹಾರ ವನ್ನು ಪ್ರಾರಂಬಿಸಬೇಕು. ಕೇವಲ ಯೋಜನೆ ಜಾರಿಗೆ ತಂದರೆ ಸಾಲದು ಅದನ್ನು ಆಗಿಂದಾಗೆ ಕ್ರಮಬದ್ದವಾಗಿ ಮೌಲ್ಯಮಾಪನ ಮಾಡುತ್ತಿರಬೇಕು ಯಾಕೆಂದರೆ ತಾನು ಮಾಡಿದ ಯೋಜನೆಯು ತನ್ನ ಸದಸ್ಯರ ಅಗತ್ಯತೆಗಳನ್ನು ಪೂರೈಸಿದೆಯೇ ಎಂಬುದನ್ನು ಅರಿತ ನಂತರವೇ ಆ ಯೋಜನೆಯ ಗಾತ್ರವನ್ನು ಹೆಚ್ಚಿಸುತ್ತಾಹೋಗಬೇಕು, ಈ ರೀತಿ ಯಾವ ಸಹಕಾರಿಯು ತನ್ನ ವ್ಯವಹಾರವನ್ನು ಕ್ರಮಬದ್ದವಾಗಿ ನಿರ್ವಹಿಸುತ್ತದೆಯೇ ಅದು ಸಾಲ ಹಾಗು ನಷ್ಟದ ಸುಳಿಯಿಂದ ಹೂರಬರಲು ಸಾದ್ಯವಾಗುತ್ತದೆ.

ಯಾವುದೇ ವ್ಯವಹಾರಗಳ ಚಟುವಟಿಕೆಯ ಯೋಜನೆಯನ್ನು ಆರಂಬಿಸಿದರು ಕ್ರಮಬದ್ದವಾದ ನಿರ್ವಹಣಾ ಕ್ವಶಲ್ಯದಿಂದ್ದ ಮಾತ್ರ ಸಹಕಾರಿಯು ಉತ್ತಮ ಲಾಭಗಳಿಸಲು ಸಾದ್ಯವಾಗುತ್ತದೆ, ಆದರಿಂದ ಸಹಕಾರಿಗಳು ಮೂದಲು ವ್ಯವಹಾರ ನಿರ್ವಹಣಾ ಜ್ಞಾನ ಅರಿತುಕೂಳ್ಳುವುದು ಅಗತ್ಯ ಹಾಗೂ ಅನಿವಾರ್ಯ. ■

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲು ನಿರ್ಧರಿಸಲಾಗಿದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ – ಸಂಪಾದಕರು

## ನಿಮ್ಮ ಪ್ರಶ್ನೆ



## ನಮ್ಮ ಉತ್ತರ

- **ಪ್ರಶ್ನೆ : ಒಂದು ಸಹಕಾರಿಯು ನೊಂದಣಿಯಾದ ನಂತರ ಪ್ರಥಮ ಮಹಾಸಭೆಯನ್ನು ಯಾರು ಕರೆಯಬೇಕು.**

  **ಉತ್ತರ :** ಒಂದು ಸಹಕಾರಿಯು ನೊಂದಣಿಯಾದ ನಂತರ ಪ್ರಥಮ ಮಹಾ ಸಭೆಯನ್ನು ಚುನಾವಣಾ ಪ್ರಾಧಿಕಾರದಿಂದ ನೇಮಕವಾಗುವ ಚುನಾವಣಾಧಿಕಾರಿಯವರು ಕರೆಯಬೇಕು.

- **ಪ್ರಶ್ನೆ : ಸಹಕಾರಿಯ ಬ್ಯಾಂಕ್ ಖಾತೆಗಳನ್ನು ನಿರ್ವಹಿಸುವ ಜವಾಬ್ದಾರಿ ಯಾರಿಗೆ ಇರುತ್ತದೆ.**

  **ಉತ್ತರ :** ಸೌಹಾರ್ದ ಸಹಕಾರಿ ಅಧಿನಿಯಮ 1997 ಕಲಂ 31(2) (ಸಿ) ಪ್ರಕಾರ ಸಹಕಾರಿಯ ಬ್ಯಾಂಕ್ ಖಾತೆಗಳನ್ನು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು ನಿರ್ವಹಿಸಬೇಕು. ಆದಾಗ್ಯೂ ಮುಖ್ಯ ಕಾರ್ಯನಿರ್ವಾಹಕರೊಂದಿಗೆ ಅಧ್ಯಕ್ಷರು ಅಥವಾ ಉಪಾಧ್ಯಕ್ಷರು ಜಂಟಿ ಸಹಿಯೊಂದಿಗೆ ನಿರ್ವಹಿಸಬಹುದು.

- **ಪ್ರಶ್ನೆ : ಒಂದು ಸಹಕಾರಿಯ ಸ್ಥಿರಾಸ್ತಿಗೆ ಸಂಬಂಧಿಸಿದ ದಸ್ತಾವೇಜುಗಳಿಗೆ, ಒಪ್ಪಂದಗಳಿಗೆ ಮತ್ತು ಕರಾರುಗಳಿಗೆ ಯಾರು ಸಹಿಮಾಡಬೇಕು.**

  **ಉತ್ತರ :** ಸಹಕಾರಿಯ ಸ್ಥಿರಾಸ್ತಿಗೆ ಸಂಬಂಧಿಸಿದ ದಸ್ತಾವೇಜುಗಳಿಗೆ ಒಪ್ಪಂದಗಳಿಗೆ ಹಾಗು ಕರಾರುಗಳಿಗೆ ಸಹಕಾರಿಯ ಮುಖ್ಯ ಕಾರ್ಯನಿರ್ವಾಹರು ಸಹಿ ಮಾಡಬೇಕು.

- **ಪ್ರಶ್ನೆ : ಅರ್ಹ ಮತದಾರರ ಪಟ್ಟಿಯನ್ನು ಯಾವಾಗ ಪ್ರಕಟಿಸಬೇಕು.**

  **ಉತ್ತರ :** ಅರ್ಹ ಮತದಾರರ ಪಟ್ಟಿಯನ್ನು ಸೌಹಾರ್ದ ಸಹಕಾರಿ ಅಧಿನಿಯಮ ಕಲಂ 32 (1) (ಡಿ) ಪ್ರಕಾರ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು ಎಪ್ರೀಲ್ 30ರ ಒಳಗಾಗಿ ಪ್ರಕಟಿಸತಕ್ಕದ್ದು.

- **ಪ್ರಶ್ನೆ : ಸಹಕಾರಿಯ ಸದಸ್ಯರಲ್ಲದವರೊಂದಿಗೆ ವ್ಯವಹರಿಸಲು ಅವಕಾಶವಿದೆಯೇ?**

  **ಉತ್ತರ :** ಸೌಹಾರ್ದ ಸಹಕಾರಿ ಅಧಿನಿಯಮ 1997 ಕಲಂ 22ರನ್ವಯ ಸಹಕಾರಿಯ ಸೇವೆ ಸದಸ್ಯರಿಗೆ ಮಾತ್ರ ಲಭ್ಯವಿರುತ್ತದೆ.

## ಸ್ವಾಭಿಮಾನಿ ಪತ್ರಿಕೆ : ಅನಿಸಿಕೆ

- **ಮಹೇಶಕುಮಾರ ಡಿ. (ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಂಡ್ಯ)**

  ಈ ಪತ್ರಿಕೆಯಿಂದ ಕಾಲಕಾಲಕ್ಕೆ ಆಗುತ್ತಿರುವ ಕಾಯಿದೆ ತಿದ್ದುಪಡಿಯ ಬಗ್ಗೆ ತಿಳಿಯುತ್ತಿರುವುದರಿಂದ ಅನುಕೂಲವಾಗಿದೆ ಹಾಗೂ ನಮ್ಮ ರಾಜ್ಯದಲ್ಲಿ ಆಗುವಂತಹ ಸೌಹಾರ್ದ ಸಹಕಾರಿಯ ಬೆಳವಣಿಗೆಗಳ ಕಾರ್ಯಕ್ರಮಗಳು ಹಾಗೂ ತರಬೇತಿ ಕಾರ್ಯಕ್ರಮಗಳು ಹಾಗೂ ತರಬೇತಿ ಕಾರ್ಯಕ್ರಮದ ವಿವರಗಳು ಬಹಳ ಚೆನ್ನಾಗಿ ಬರುವುದರಿಂದ ಎಲ್ಲ ಸೌಹಾರ್ದ ಬಂಧುಗಳಿಗೆ ಸಹಕಾರಿಗಳ ಬೆಳವಣಿಗೆ ಬಗ್ಗೆ ಅರಿವು ಮೂಡಿಸುತ್ತಿದೆ.

- **ಅಶೋಕ ಜಿ. ಬಂಕಾಪುರೆ (ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೋರಗಾಂವ್)**

  ಸ್ವಾಭಿಮಾನಿ ಸಹಕಾರಿ ಪತ್ರಿಕೆಯಿಂದ ಸಾಕಷ್ಟು ಮಾಹಿತಿ ಸಿಗುತ್ತಿದ್ದು, ಸಹಕಾರಿ ಸಾಲ ವಸೂಲಾತಿ ಹಾಗೂ ಆಡಳಿತ ಬಗ್ಗೆ ಹೆಚ್ಚಿನ ಮಾಹಿತಿ ಬರಬೇಕು. ಸಹಕಾರಿ ಸುಸ್ತಿ ಸಾಲಗಾರರಿಗೆ ಆದ ಶಿಕ್ಷೆ ಹಾಗೂ ದಂಡಗಳನ್ನು ಸಹ ವಿಧಿಸಿದ್ದರೆ ಆ ಬಗ್ಗೆ ಸವಿಸ್ತಾರ ಮಾಹಿತಿ ಒದಗಿಸುವುದು.

- **ಎನ್. ಜಯಶೇಖರ್ (ಶ್ರೀ ವಾಸವಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಳ್ಳೇಗಾಲ)**

  ಕಾಲಕಾಲಕ್ಕೆ ಬದಲಾಗುತ್ತಿರುವ ಸಹಕಾರಿಯ ಕೆಲವು ವಿಷಯಗಳನ್ನು ತಿಳಿಯಲು ಸಹಕಾರಿಯಾಗಿದೆ. ಹಬ್ಬ ಹರಿದಿನಗಳ ಶುಭಾಶಯ ತಿಳಿಸುವುದು ಮತ್ತು ಇತರೆ ಸಹಕಾರಿಗಳ ಪದಾಧಿಕಾರಿಗಳ ಆಯ್ಕೆ ಮತ್ತು ಶುಭಾಶಯ ಪತ್ರ, ಲೆಕ್ಕಪರಿಶೋಧನೆ ಮತ್ತು ಪರಿಣಿತರಿಂದ ಸಂಪೂರ್ಣ ಮಾಹಿತಿಗಳನ್ನು, ಸಂಪನ್ಮೂಲ ವ್ಯಕ್ತಿಗಳಿಂದ ನೀಡುವ ವಿವರಗಳು ಇವು ತುಂಬಾ ಉಪಯುಕ್ತವಾಗಿವೆ.

# MASTER CIRCULARS ISSUED BY RESERVE BANK OF INDIA



**K.Vittal Shetty,** B.A, DJPR, CAIIB, DBM (IIB) & MBM,
(Former Chief General Manager & CEO of SUCO BANK)

MASTER CIRCULARS ON Co-operative Banking Issued between July 01, 2014 to June 30,2015.

01 Master Circular on Maintenance of Statutory Reserves - Cash Reserve Ratio (CRR) and Statutory Liquidity Ratio (SLR) by Primary (Urban) Co-operative Banks.
02 Master Circular on Area of Operation, Branch Authorisation Policy, Opening/ Up-gradation of Extension Counters, ATMs and Shifting/Splitting/ Closure of Offices.
03 Master Circular on Investments by Primary (Urban) Co-operative Banks
04 Master Circular- Income Recognition, Asset Classification, Provisioning and Other Related Matters - UCBs
05 Master Circular on Maintenance of Deposit Accounts – Primary (Urban) Co-operative Banks
06 Master Circular Interest Rates on Rupee Deposits – Primary (Urban) Co-operative Banks
07 Master Circular on Know Your Customer (KYC) Norms/Anti-Money Laundering (AML) Measures/Combating of Financing of Terrorism (CFT) / Obligations of banks under Prevention of Money Laundering Act (PMLA), 2002
08 Master Circular on Customer Service - UCBs
09 Master Circular- Exposure Norms and Statutory / Other Restrictions - UCBs
10 Master Circular- Guarantees, Co-Acceptances & Letters of Credit - UCBs
11 Master Circular - Priority Sector Lending - UCBs
12 Master Circular- Management of Advances - UCBs
13 Master Circular- Finance for Housing Schemes - UCBs
14 Master Circular - Prudential Norms on Capital Adequacy - UCBs
15 Master Circular on Inspection & Audit Systems in Primary (Urban) Co-operative Banks
16 Master Circular on Board of Directors - UCBs
17 Master Circular on Frauds - Classification and Reporting

**Note :** Master Circulars are a one-point reference of instructions issued by the Reserve Bank of India on a particular subject between July-June. These are issued on July 1 every year and automatically expire on June 30 next year. You can access the Master Circulars issued in previous years by using the Archives. For printing of these circulars please use the PDF version.

## RBI News for June - 2015

Reserve Bank of India Governor Dr. Raghuram Rajan has announced the Second Bi-Monthly Monetary Policy statement; 2015-16 on 2nd June 2015.

On the basis of an assessment of the current and evolving macroeconomic situation, it has been decided to:

Reduce the Policy repo rate under the liquidity adjustment facility (LAF) by 25 basis points from 7.5 per cent to 7.25 per cent with immediate effect;

SLR/CRR remains unchanged

Bank Rate stands reduced to 8.25 per cent.

**The third bi-monthly monetary policy statement will be announced on August 4, 2015**

**Policy Rates with effect from 2nd June 2015**

| | |
|---|---|
| REPO RATE | 7.25% |
| REVERSE REPO RATE | 6.25% |
| MARGINAL STANDING FACILITY RATE | 8.25% |
| BANK RATE | 8.25% |

**Reserve Ratios**

| | |
|---|---|
| Cash Reserve Ratio | 4% |
| Statutory Reserve Ratio | 21.5% |

**4. Scheduled Commercial Banks - Business in India**

( Billion)

| Item | Outstanding as on Jun. 12, 2015 | Variation over | | | | |
|---|---|---|---|---|---|---|
| | | Fortnight | Financial year so far | | Year-on-year | |
| | | | 2014-15 | 2015-16 | 2014 | 2015 |
| | 1 | 2 | 3 | 4 | 5 | 6 |
| 2.1 Aggregate Deposits | 87,664.6 | –228.1 | 1,426.3 | 2,331.8 | 9,123.4 | 9,182.8 |
| 2.1a Growth (Per cent) | | –0.3 | 1.9 | 2.7 | 13.2 | 11.7 |
| 2.1.1 Demand | 7,964.3 | –222.2 | 76.8 | 24.0 | 812.1 | 748.3 |
| 2.1.2 Time | 79,700.4 | –5.9 | 1,349.5 | 2,307.8 | 8,311.3 | 8,434.5 |
| 2.2 Borrowings | 2,405.6 | 39.9 | –194.1 | 146.8 | –222.1 | 389.3 |
| 7 Bank Credit | 66,538.3 | 204.1 | 683.4 | 1,174.1 | 7,151.1 | 5,913.9 |
| 7.1a Growth (Per cent) | | 0.3 | 1.1 | 1.8 | 13.4 | 9.8 |
| 7a.1 Food Credit | 1,168.6 | 3.2 | 112.6 | 224.4 | –14.0 | 71.3 |
| 7a.2 Non-food credit | 65,369.7 | 200.9 | 570.8 | 949.6 | 7,165.1 | 5,842.6 |
| 8 Investments | 26410.3 | 171.1 | | | | |

1. Smt. Meena Hemchandra takes charge as New Executive Director at RBI on 1st June 2015
2. ● RBI imposes penalty on Shree Mahalaxmi Mercantile Co-operative Bank Ltd., Dabhoi, Dist. Vadodara

Swabhimani Sahakari, Monthly, Posting Day 8th.
Posted at Bangalore PSO, Mysore Road, Bangalore 560026
Registered No. RNP/BGW/1744/2014-16. RNI No. KARBIL - 2004/18001. Pages 24

(Gujarat)

- RBI imposes penalty on Integral Urban Co-operative Bank Limited, Jaipur
- RBI extends Directions issued to Indian Mercantile Co-operative Bank Ltd., Lucknow, UttarPradesh till September 11, 2015:
- RBI imposes penalty on The Pij Peoples Co-operative Bank Ltd., Pij, Dist. Kheda:
- RBI penalises The Kutch Mercantile Co-operative Bank Ltd., Rapar, Dist. Kutch (Gujarat):
- RBI extends Directions issued to The Janata Commercial Cooperative Bank Ltd., Khamgaon (Buldhana), Maharashtra till September 13, 2015:
- RBI imposes penalty on The Sutex Co-operative Bank Ltd., Surat (Gujarat):
- RBI imposes penalty on The Junagadh Commercial Co-operative Bank Ltd., Junagadh (Gujarat):
- RBI imposes penalty on The Hubli Urban Co-operative Bank Ltd., Hubli, Karnataka :
- The R.S.Co-operative Bank Ltd., Mumbai, Maharashtra under RBI directions
- RBI cancels Licence of Vitthal Nagari Sahakari Bank Ltd., Latur (Maharashtra):

3. Issue of ? 10 Banknotes with incorporation of Rupee symbol (?) and inset letter ‘U’ :

   **RBI extends the Date for Withdrawal of Pre-2005 Series Banknotes**

4. Basel III implementation assessments of India published by Basel Committee:

5. Hindi and Other Indian Languages can act as a bridge between Banker and Customer:

   Dr. Raghuram G. Rajan, Governor, Reserve Bank of India, June 19, 2015

6. Indian Economy Resilient but No Room for Complacency: Says RBI’s June 2015 Financial Stability Report.

The FSR reflects the collective assessment of the Sub-Committee of the Financial Stability and Development Council (FSDC) on risks to financial stability, as also the resilience of the financial system.

Global economic recovery still seems to be far from being self-sustaining even as spill-overs from the monetary policy stance in advanced economies (AEs) are increasing.. Developments on the Greek debt crisis front and uncertainty over the timing of rate increases by the US Federal Reserve remain immediate possible triggers for global financial market volatility.

**Banking sector**

While risks to the banking sector, as reflected by the Banking Stability Indicator and Map, have moderated, concerns remain over the continued weakness in asset quality indicated by the rising trend in stressed advances ratio of scheduled commercial banks (SCBs), especially of public sector banks (PSBs). Macro stress tests suggest that current deterioration in the asset quality of SCBs may continue for few more quarters, and PSBs may have to bolster their provisions for credit risk from present levels, to meet the ‘expected losses’ if macroeconomic environment were to deteriorate under assumed stress scenarios.

The falling profit margins and decreasing debt repayment capabilities of the corporate sector add to these concerns, though overall leverage level in Indian economy is comfortable when compared to other jurisdictions.

While the regulatory move towards encouraging greater market access and market discipline will help the development of domestic financial markets, the banking sector, especially the PSBs will be expected to continue to shoulder the needs of the accelerating growth in the economy. In this context, the policy initiatives for improving the governance and management processes at public sector banks become significant. The agricultural insurance needs urgent focus in the wake of frequent episodes of weather related calamities and their impact, particularly on small and marginal farmers.

Overall, India’s relatively stronger macroeconomic fundamentals in terms of growth, inflation, current account and fiscal deficits provide a reasonable degree of resilience to Indian financial system in the event of spill-over effects from global factors. However, with the continued uncertainty over global growth and in the absence of effective international monetary policy coordination, there can be no room for complacency.

**Source: RBI Website**

**kohimavittal@hotmail.com, Mobile: 9845699904**

ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್,1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1–ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು.500 010. ದೂ: 080 23525546
ಮೈಸೂರು ವಿಭಾಗೀಯ ಕಛೇರಿ : ನಂ. 200, ಶಂಕರ ಮಠ ಮುಖ್ಯರಸ್ತೆ, ಕಿಲ್ಲೇ ಮೊಹಲ್ಲಾ, ಮೈಸೂರು.
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831–2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಕಲಬುರಗಿ – 585102. ದೂ. 08472–270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010